
## ಡಾ|| ರಾಜ್‌ಕುಮಾರ್ ಅಕಾಡೆಮಿ ಬೆಂಗಳೂರು

ಡಾ|| ರಾಜ್‌ಕುಮಾರ್ ಕುಟುಂಬದವರ ಕೊಡುಗೆ

# ವಾರದ ಸುದ್ದಿ ಸಂಕಲನ

### ಸ್ಪಷ್ಟ ಮತ್ತು ಸಮಗ್ರ ವಿದ್ಯಮಾನಗಳು



## ಮೇ ೪ನೇ ವಾರ

18-05-2026 TO 23-05-2026

# ಭಾರತ- ಡಚ್: 17 ಒಪ್ಪಂದಕ್ಕೆ ಸಹಿ

'ಸುಪ್ರೀಂ' ನ್ಯಾಯಮೂರ್ತಿ ಸಂಖ್ಯೆ 38ಕ್ಕೆ

ಭಾರತ-ಯುಎಇ ಒಪ್ಪಂದ

ಆರ್‌ಟಿಐ ವ್ಯಾಪ್ತಿಗಿಲ್ಲ ಬಿಸಿಸಿಐ

'ನಾರ್ಡಿಕ್' ಪ್ರಧಾನಿಗಳ ಜೊತೆ ಮೋದಿ ಚರ್ಚೆ

ವಾರದ ಪ್ರಚಲಿತ ಘಟನೆಗಳು - ಪ್ರಜಾವಾಣಿ

**ದಿನಾಂಕ:** 18ನೇ ಮೇ – 23ನೇ ಮೇ 2026

# ಭಾರತ– ಡಚ್: 17 ಒಪ್ಪಂದಕ್ಕೆ ಸಹಿ

## ಪಶ್ಚಿಮ ಏಷ್ಯಾ, ಉಕ್ರೇನ್ ಸ್ಥಿತಿ–ಗತಿ ಕುರಿತು ಮೋದಿ–ರಾಬ್ ಜೆಟ್ಟೆನ್ ಚರ್ಚೆ

ದಿ ಹೇಗ್ (ಪಿಟಿಐ): ಭಾರತ ಮತ್ತು ನೆದರ್ಲೆಂಡ್ಸ್ ನಡುವೆ ರಕ್ಷಣಾ ಪಾಲುದಾರಿಕೆ ಬಲಗೊಳಿಸಲು, ವಿರಳ ಖನಿಜಗಳು ಮತ್ತು ಇತರ ಮಹತ್ವದ ಕ್ಷೇತ್ರಗಳಲ್ಲಿ ಸಹಕಾರ ವೃದ್ಧಿಸಲು 17 ಒಪ್ಪಂದಗಳು ಏರ್ಪಟ್ಟಿವೆ.

ಎರಡೂ ದೇಶಗಳ ನಡುವೆ ವ್ಯಾಪಾರ, ಹೂಡಿಕೆ, ಭದ್ರತೆ, ಸೆಮಿಕಂಡಕ್ಟರ್, ಬಾಹ್ಯಾಕಾಶ, ಕ್ವಾಂಟಮ್ ಕಂಪ್ಯೂಟಿಂಗ್ ಸೇರಿದಂತೆ ಉದಯೋನ್ಮುಖ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಸಂಬಂಧ ಬಲಗೊಳ್ಳಲು ಈ ಒಪ್ಪಂದಗಳು ನೆರವಾಗಲಿವೆ.

ನೆದರ್ಲೆಂಡ್ಸ್, ಸ್ವೀಡನ್, ನಾರ್ವೆ, ಇಟಲಿ ದೇಶಗಳಿಗೆ ನಾಲ್ಕು ದಿನಗಳ ಪ್ರವಾಸ ಕೈಗೊಂಡಿರುವ ಪ್ರಧಾನಿ ನರೇಂದ್ರ ಮೋದಿ ಅವರು ನೆದರ್ಲೆಂಡ್ಸ್ ಪ್ರಧಾನಿ ರಾಬ್ ಜೆಟ್ಟೆನ್ ಅವರ ಜತೆ ಮಾತುಕತೆ ನಡೆಸಿದ ಬಳಿಕ ಈ ಒಪ್ಪಂದಗಳಿಗೆ ಸಹಿ ಹಾಕಲಾಗಿದೆ.

'ಎರಡೂ ದೇಶಗಳು ಸಾಗಬೇಕಾದ ಗುರಿ, ಉದ್ದೇಶಗಳ ಕುರಿತು ಈ ವೇಳೆ ವಿಸ್ತೃತವಾಗಿ ಚರ್ಚೆ ನಡೆದಿದೆ. ತಂತ್ರಜ್ಞಾನ ವರ್ಗಾವಣೆ, ಜಂಟಿ ಉದ್ಯಮಗಳ ಸ್ಥಾಪನೆ ಮೂಲಕ ರಕ್ಷಣಾ ಉಪಕರಣಗಳು, ಘಟಕಗಳು ಸೇರಿದಂತೆ ಇತರ ವಸ್ತುಗಳ ಉತ್ಪಾದನೆಯನ್ನು ಖಚಿತಪಡಿಸಿಕೊಳ್ಳುವ ಅಗತ್ಯವಿದೆ' ಎಂದು ಇಬ್ಬರೂ ನಾಯಕರು ಪ್ರತಿಪಾದಿಸಿದರು.

> **ಭಾರತದಲ್ಲಿ ಹೂಡಿಕೆ ಮಾಡಲು ಮತ್ತು ಉತ್ಪಾದನಾ ಘಟಕಗಳನ್ನು ಸ್ಥಾಪಿಸಲು ಅಪಾರ ಅವಕಾಶಗಳಿವೆ. ಅದಕ್ಕಾಗಿ ಡಚ್ ಕಂಪನಿಗಳನ್ನು ಸ್ವಾಗತಿಸುತ್ತೇನೆ**
> **ನರೇಂದ್ರ ಮೋದಿ,** ಪ್ರಧಾನಿ

ಐರೋಪ್ಯ ದೇಶಗಳ ಪೈಕಿ ನೆದರ್ಲೆಂಡ್ಸ್, ಭಾರತದ ಪ್ರಮುಖ ಹೂಡಿಕೆದಾರ ದೇಶವಾಗಿದೆ. ಆ ದೇಶದ 55.6 ಬಿಲಿಯನ್ ಡಾಲರ್ (ಸುಮಾರು ₹5.5 ಲಕ್ಷ ಕೋಟಿ) ವಿದೇಶಿ ನೇರ ಹೂಡಿಕೆ ಭಾರತದಲ್ಲಿದೆ.

**ಪಶ್ಚಿಮ ಏಷ್ಯಾದ ಸ್ಥಿತಿ-ಗತಿ ಚರ್ಚೆ:** ಇಬ್ಬರೂ ನಾಯಕರು ಪಶ್ಚಿಮ ಏಷ್ಯಾದಲ್ಲಿನ ಸ್ಥಿತಿಗತಿ ಕುರಿತು ಚರ್ಚಿಸಿ, ತೀವ್ರ ಕಳವಳ ವ್ಯಕ್ತಪಡಿಸಿದರು. ಜಾಗತಿಕ ಇಂಧನ ಪೂರೈಕೆ ಸರಪಳಿ ಮತ್ತು ವ್ಯಾಪಾರ ಜಾಲಕ್ಕೆ ಹೊಡೆತ ಬಿದ್ದಿರುವ ಬಗ್ಗೆ ಚರ್ಚಿಸಿದರು. ಹೊರ್ಮುಜ್ ಜಲಸಂಧಿಯಲ್ಲಿ ನಿರ್ಬಂಧವಿಲ್ಲದೆ, ಮುಕ್ತ ಸಂಚಾರಕ್ಕೆ ಅವಕಾಶ ಇರಬೇಕು ಎಂದು ಪ್ರತಿಪಾದಿಸಿದರು.

ಇದೇ ವೇಳೆ ಇಬ್ಬರೂ ನಾಯಕರು ಉಕ್ರೇನ್-ರಷ್ಯಾ ಯುದ್ಧ ಮತ್ತು ಅಲ್ಲಿನ ಸ್ಥಿತಿಗತಿಗಳು ಮತ್ತು ಪ್ರಾದೇಶಿಕ ಭದ್ರತೆಗೆ ಸಂಬಂಧಿಸಿದ ವಿಚಾರಗಳ ಕುರಿತು ಚರ್ಚಿಸಿದರು.



ಪ್ರಧಾನಿ ನರೇಂದ್ರ ಮೋದಿ ಮತ್ತು ನೆದರ್ಲೆಂಡ್ಸ್ ಪ್ರಧಾನಿ ರಾಬ್ ಜೆಟ್ಟೆನ್ ಅವರು ದ್ವಿಪಕ್ಷೀಯ ಮಾತುಕತೆ ವೇಳೆ ಹಸ್ತಲಾಘವ ಮಾಡಿದರು —ಪಿಟಿಐ ಚಿತ್ರ

## ಸಹಕಾರ ವೃದ್ಧಿಗೆ ಭಾರತ–ಸ್ವೀಡನ್ ಪಣ

**ಗೊತೆನ್‌ಬರ್ಗ್ (ಸ್ವೀಡನ್):** ನೆದರ್ಲೆಂಡ್ಸ್ ಭೇಟಿ ಬಳಿಕ ಭಾನುವಾರ ಸ್ವೀಡನ್‌ಗೆ ಬಂದಿಳಿದ ಪ್ರಧಾನಿ ಮೋದಿ ಅವರು ಸ್ವೀಡನ್ ಪ್ರಧಾನಿ ಉಲ್ಫ್ ಕ್ರಿಸ್ಟೆರ್‌ಸನ್ ಜತೆ ಮಾತುಕತೆ ನಡೆಸಿದರು. ಭಾರತ–ಸ್ವೀಡನ್ ದ್ವಿಪಕ್ಷೀಯ ಸಂಬಂಧವನ್ನು ಕಾರ್ಯತಂತ್ರದ ಪಾಲುದಾರಿಕೆಗೆ ಏರಿಸಲು ಇಬ್ಬರೂ ನಾಯಕರು ಒಪ್ಪಿಕೊಂಡರು.

ವ್ಯಾಪಾರ, ಹೂಡಿಕೆ, ತಂತ್ರಜ್ಞಾನ ಮತ್ತು ನಾವೀನ್ಯತೆ, ಬಾಹ್ಯಾಕಾಶ, ರಕ್ಷಣೆ, ಭದ್ರತೆ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು, ಸಂಶೋಧನಾ ಕ್ಷೇತ್ರಗಳಲ್ಲಿ ಸಂಬಂಧ ಬಲಗೊಳಿಸುವ ಬಗ್ಗೆ ಚರ್ಚಿಸಿದರು.

ಭಾರತ-ಸ್ವೀಡನ್ ಸಂಬಂಧ ವೃದ್ಧಿಗೆ ನೀಡಿದ ಅಸಾಧಾರಣ ಕೊಡುಗೆಗಳಿಗಾಗಿ ಮೋದಿ ಅವರಿಗೆ ಸ್ವೀಡನ್ ಸರ್ಕಾರದ ಪ್ರತಿಷ್ಠಿತ 'ರಾಯಲ್ ಆರ್ಡರ್ ಆಫ್ ದಿ ಪೋಲಾರ್ ಸ್ಟಾರ್' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ವಿಶ್ವಸಂಸ್ಥೆಯ ಚಾರ್ಟರ್, ಅಂತರರಾಷ್ಟ್ರೀಯ ಕಾನೂನಿನ ಅನ್ವಯ ಉಕ್ರೇನ್ ಮತ್ತು ರಷ್ಯಾ ನಡುವೆ ರಾಜತಾಂತ್ರಿಕ ಮಾರ್ಗಗಳ ಮೂಲಕ ಸಂವಾದ ನಡೆಯಬೇಕು ಎಂದು ಪ್ರತಿಪಾದಿಸಿರುವ ಉಭಯ ನಾಯಕರು, ಈ ದಿಸೆಯಲ್ಲಿ ಸಮಗ್ರ, ನ್ಯಾಯಯುತ ಮತ್ತು ಶಾಶ್ವತ ಶಾಂತಿ ಸ್ಥಾಪನೆಗೆ ನಡೆಯುವ ಪ್ರಯತ್ನಗಳನ್ನು ಬೆಂಬಲಿಸುವುದಾಗಿ ಜಂಟಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.

### ಪ್ರಧಾನಿ ಹೇಳಿದ್ದು

- ಈ ವರ್ಷ ಭಾರತ ಮತ್ತು ಐರೋಪ್ಯ ಒಕ್ಕೂಟದ ನಡುವೆ ಮುಕ್ತ ವ್ಯಾಪಾರ ಒಪ್ಪಂದವಾಗಿದೆ. ಇದು ಭಾರತ-ಯುರೋಪ್ ನಡುವಿನ ಸಂಬಂಧದಲ್ಲಿ ಹೊಸ ಸುವರ್ಣ ಯುಗವನ್ನು ಆರಂಭಿಸಿದೆ
- ಭಾರತದಲ್ಲಿ 300ಕ್ಕೂ ಹೆಚ್ಚು ಡಚ್ ಕಂಪನಿಗಳು ಕಾರ್ಯನಿರ್ವಹಿಸುತ್ತಿವೆ. ಅಲ್ಲದೆ ನೆದರ್ಲೆಂಡ್ಸ್ 2ನೇ ಅತಿದೊಡ್ಡ ವ್ಯಾಪಾರ ಪಾಲುದಾರ ದೇಶವಾಗಿದೆ
- ಭಾರತವು ಖಾಸಗಿ ವಲಯಕ್ಕೆ ಹೆಚ್ಚಿನ ಅವಕಾಶಗಳನ್ನು ನೀಡುತ್ತಿದ್ದು, ಬಾಹ್ಯಾಕಾಶ, ಖನಿಜ ಮತ್ತು ಪರಮಾಣು ಇಂಧನ ಕ್ಷೇತ್ರವನ್ನು ಮುಕ್ತಗೊಳಿಸಿದೆ
- ಉದ್ಯಮಗಳಿಗೆ ಸುಲಭವಾಗಿ ವ್ಯವಹಾರ ನಡೆಸಲು ಪೂರಕವಾದ ತೆರಿಗೆ ವ್ಯವಸ್ಥೆ ಮತ್ತು ಕಾರ್ಮಿಕ ಸಂಹಿತೆಯಲ್ಲಿ ಸುಧಾರಣೆ ತರಲಾಗಿದೆ
- ಭಾರತ ಮತ್ತು ನೆದರ್ಲೆಂಡ್ಸ್ ದೇಶಗಳ ನಡುವೆ ವಿಶ್ವವಿದ್ಯಾಲಯಗಳ ಪಾಲುದಾರಿಕೆ, ಜಂಟಿಯಾಗಿ ಸಂಶೋಧನಾ ಮತ್ತು ಅಭಿವೃದ್ಧಿ ಕಾರ್ಯಗಳು ನಡೆಯಲಿವೆ

Dr. Rajkumar

# ‘ಸುಪ್ರೀಂ’ ನ್ಯಾಯಮೂರ್ತಿ ಸಂಖ್ಯೆ 38ಕ್ಕೆ: ಸುಗ್ರೀವಾಜ್ಞೆ

ಪ್ರಜಾವಾಣಿ ವಾರ್ತೆ



ನವದೆಹಲಿ: ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳ ಸಂಖ್ಯೆಯನ್ನು 33ರಿಂದ 38ಕ್ಕೆ (ಭಾರತದ ಮುಖ್ಯ ನ್ಯಾಯಮೂರ್ತಿ ಸೇರಿ) ತ್ವರಿತವಾಗಿ ಹೆಚ್ಚಿಸಲು ಕೇಂದ್ರ ಸರ್ಕಾರ ಸುಗ್ರೀವಾಜ್ಞೆ ಹೊರಡಿಸಿದೆ.

ಈ ಕುರಿತು ಸಂಸತ್ತಿನಲ್ಲಿ ಮಸೂದೆ ಮಂಡಿಸಲು ಕೇಂದ್ರ ಸಚಿವ ಸಂಪುಟ ಮೇ 5ರಂದು ನಿರ್ಧಾರ ತೆಗೆದುಕೊಂಡಿತ್ತು. ಅದರ ಬೆನ್ನಲ್ಲೇ ಸುಗ್ರೀವಾಜ್ಞೆ ಹೊರಡಿಸಲಾಗಿದೆ.

‘ಸುಪ್ರೀಂ ಕೋರ್ಟ್ (ನ್ಯಾಯಮೂರ್ತಿಗಳ ಸಂಖ್ಯೆ) ತಿದ್ದುಪಡಿ ಸುಗ್ರೀವಾಜ್ಞೆ–2026’ಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಶನಿವಾರ ಸಹಿ ಮಾಡಿದ್ದಾರೆ.

ಆದಾಗ್ಯೂ, ಆರು ತಿಂಗಳೊಳಗೆ ಈ ಸುಗ್ರೀವಾಜ್ಞೆ ಸಂಸತ್ತಿನಲ್ಲಿ ಅಂಗೀಕಾರ ಪಡೆಯಬೇಕು. ಇಲ್ಲದಿದ್ದರೆ ಅದು ರದ್ದಾಗುತ್ತದೆ. ಜುಲೈನಲ್ಲಿ ಮಳೆಗಾಲದ ಅಧಿವೇಶನ ನಡೆಯುವ ಸಾಧ್ಯತೆಯಿದೆ. ಆದರೆ, ಈ ಸುಗ್ರೀವಾಜ್ಞೆಯನ್ನು ತುರ್ತಾಗಿ ತರುವ ಅಗತ್ಯವೇನಿತ್ತು ಎಂಬುದು ಸ್ಪಷ್ಟವಾಗಿಲ್ಲ. ನ್ಯಾಯಮೂರ್ತಿಗಳ ಸಂಖ್ಯೆಯ ಹೆಚ್ಚಳವು ತ್ವರಿತ ಮತ್ತು ಪರಿಣಾಮಕಾರಿ ನ್ಯಾಯವನ್ನು ಖಾತರಿಪಡಿಸುತ್ತದೆ ಎಂದು ಸರ್ಕಾರ ಈ ಹಿಂದೆ ಹೇಳಿತ್ತು.

ಸಂವಿಧಾನವು ಒಬ್ಬ ಮುಖ್ಯ ನ್ಯಾಯಮೂರ್ತಿ ಮತ್ತು ಇತರ ಏಳು ನ್ಯಾಯಮೂರ್ತಿಗಳಿಗೆ ಅವಕಾಶ ನೀಡಿದ್ದರೂ, ‘ಸುಪ್ರೀಂ ಕೋರ್ಟ್ (ನ್ಯಾಯಮೂರ್ತಿಗಳ ಸಂಖ್ಯೆ) ಕಾಯ್ದೆ–1956’ ನ್ಯಾಯಮೂರ್ತಿಗಳ ಸಂಖ್ಯೆಯನ್ನು 10ಕ್ಕೇರಿಸಲು ಅವಕಾಶ ಮಾಡಿಕೊಟ್ಟಿತು. ಈ ಕಾಯ್ದೆಗೆ ಹಲವು ಬಾರಿ ತಿದ್ದುಪಡಿಗಳಾಗಿದ್ದು, 1960ರಲ್ಲಿ ನ್ಯಾಯಮೂರ್ತಿಗಳ ಸಂಖ್ಯೆ 13ಕ್ಕೆ, 1977ರಲ್ಲಿ 17ಕ್ಕೆ, 1986ರಲ್ಲಿ 25ಕ್ಕೆ, 2008ರಲ್ಲಿ 30ಕ್ಕೆ ಹಾಗೂ 2019ರಲ್ಲಿ ತಿದ್ದುಪಡಿ ಮೂಲಕ ನ್ಯಾಯಮೂರ್ತಿಗಳ ಸಂಖ್ಯೆಯನ್ನು 33ಕ್ಕೆ ಹೆಚ್ಚಿಸಲಾಯಿತು.

Academy

### ಲಕ್ಕುಂಡಿಯನ್ನು ಜಾಗತಿಕ ಪಾರಂಪರಿಕ ತಾಣವಾಗಿಸಲು ಸರ್ಕಾರ ನಿರ್ಧಾರ


# ವಾರದಲ್ಲಿ 1,500 ಪ್ರಾಚ್ಯಾವಶೇಷ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಇತಿಹಾಸದಲ್ಲಿ ಮಹತ್ವದ ಸ್ಥಾನವಿರುವ ಲಕ್ಕುಂಡಿಯನ್ನು ಜಾಗತಿಕ ಪಾರಂಪರಿಕ ತಾಣವನ್ನಾಗಿಸಲು ಸರ್ಕಾರ ನಿರ್ಧರಿಸಿದೆ. ಇದರ ಭಾಗವಾಗಿ ಮೇ ತಿಂಗಳ ಮೊದಲ ವಾರದಲ್ಲಿ ನಡೆಸಿದ ಅಭಿಯಾನದಲ್ಲಿ 1,500ಕ್ಕೂ ಹೆಚ್ಚು ಪ್ರಾಚ್ಯಾವಶೇಷಗಳನ್ನು ಸಂಗ್ರಹಿಸಲಾಗಿದೆ ಎಂದು ಪ್ರವಾಸೋದ್ಯಮ ಸಚಿವ ಎಚ್‌.ಕೆ.ಪಾಟೀಲ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕಲ್ಯಾಣ ಚಾಲುಕ್ಯರು, ಬಾದಾಮಿ ಚಾಲುಕ್ಯರು ಮತ್ತು ಹೊಯ್ಸಳರ ಆಳ್ವಿಕೆಯ ಅವಧಿಯ ವಾಸ್ತುಶಿಲ್ಪ ಶೈಲಿಯ ಕುರುಹುಗಳು ಲಕ್ಕುಂಡಿಯಲ್ಲಿ ಯಥೇಚ್ಛವಾಗಿ ಸಿಕ್ಕಿವೆ. ಮೂರೂ ವಾಸ್ತುಶಿಲ್ಪ ಶೈಲಿಗಳ ಮಧ್ಯೆ ಇರುವ ಸಾಮ್ಯತೆ, ವ್ಯತ್ಯಾಸ ಮತ್ತು ಶೈಲಿ ಬದಲಾದ ಬಗೆಯನ್ನು ಇಲ್ಲಿನ ಪ್ರಾಚ್ಯಾವಶೇಷಗಳಲ್ಲಿ ಕಾಣಬಹುದಾಗಿದೆ’ ಎಂದರು.

‘2024ರ ನವೆಂಬರ್‌ನಲ್ಲಿ ಲಕ್ಕುಂಡಿಯಲ್ಲಿ ಪಲ್ಲಕ್ಕಿ ಉತ್ಸವ ನಡೆಸಲಾಗಿತ್ತು. ನಂತರ ಅಭಿಯಾನ ನಡೆಸಿ, ಸಾರ್ವಜನಿಕರ ಬಳಿ ಇದ್ದ ಪ್ರಾಚ್ಯಾವಶೇಷಗಳನ್ನು ಸಂಗ್ರಹಿಸಲಾಯಿತು. ಒಂದು ವರ್ಷದ ಅವಧಿಯಲ್ಲಿ 3,000 ಕ್ಕೂ ಹೆಚ್ಚು ಪ್ರಾಚ್ಯಾವಶೇಷಗಳನ್ನು ಸಂಗ್ರಹಿಸಲಾಯಿತು. ನಂತರ ಇದನ್ನು ಜನಾಂದೋಲನವನ್ನಾಗಿ ಪರಿವರ್ತಿಸಿ, ಸಂಗ್ರಹ ಮತ್ತು ಸಂರಕ್ಷಣೆ ಕಾರ್ಯದಲ್ಲಿ ಜನರನ್ನೂ ಒಳಗೊಳ್ಳಲಾಯಿತು’ ಎಂದು ಅವರು ವಿವರಿಸಿದರು.



ಲಕ್ಕುಂಡಿಯಲ್ಲಿ ಈಚೆಗೆ ಕೈಗೊಳ್ಳಲಾಗಿದ್ದ ವಿಶೇಷ ಅಭಿಯಾನದ ವೇಳೆ ಸಂಗ್ರಹವಾದ ಪ್ರಾಚ್ಯವಸ್ತುಗಳು

## ದೆಹಲಿಯಿಂದ ಪ್ರಾಚ್ಯವಸ್ತುಗಳ ವಾಪಸ್‌ಗೆ ಕ್ರಮ

ಲಕ್ಕುಂಡಿಯಲ್ಲಿ ಸಂಗ್ರಹಿಸಲಾಗಿದ್ದ ಹಲವು ಪ್ರಾಚ್ಯವಸ್ತುಗಳನ್ನು 50 ವರ್ಷಗಳ ಹಿಂದೆಯೇ ದೆಹಲಿಗೆ ಕೊಂಡೊಯ್ಯಲಾಗಿದೆ. ಅವುಗಳನ್ನು ದೆಹಲಿಯ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿ ಪ್ರದರ್ಶನಕ್ಕೆ ಇರಿಸಲಾಗಿದೆ. ಅವುಗಳನ್ನು ಲಕ್ಕುಂಡಿಗೆ ವಾಪಸ್ ತರಲು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್‌.ಕೆ.ಪಾಟೀಲ ಅವರು ತಿಳಿಸಿದರು.

ಈಚೆಗೆ ದೆಹಲಿಯ ಪ್ರಾಚ್ಯವಸ್ತು ಸಂಗ್ರಹಾಲಯಕ್ಕೆ ಭೇಟಿ ನೀಡಿದ್ದ ಅವರು, ಅಲ್ಲಿರುವ ಲಕ್ಕುಂಡಿಯ ಪ್ರಾಚ್ಯಾವಶೇಷಗಳ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡಿದ್ದರು. ಜತೆಗೆ ಅವುಗಳನ್ನು ಲಕ್ಕುಂಡಿಗೆ ವಾಪಸ್ ತರುವ ಪ್ರಕ್ರಿಯೆಯ ಬಗ್ಗೆಯೂ ವಿವರಣೆ ಪಡೆದುಕೊಂಡಿದ್ದರು.

‘2026ರ ಮೇ ಮೊದಲ ವಾರದಲ್ಲಿ ನಡೆದ ಅಭಿಯಾನದಲ್ಲಿ ಲಕ್ಕುಂಡಿ ವ್ಯಾಪ್ತಿಯಲ್ಲಿ ಐದು ಪುರಾತನ ದೇವಾಲಯ ಮತ್ತು ಐದು ಪುರಾತನ ಬಾವಿಗಳನ್ನು ಅನಾವರಣ ಮಾಡಲಾಯಿತು. ಗಿಡಗಂಟಿಗಳು, ಪೊದೆಗಳಲ್ಲಿ ಮರೆಯಾಗಿದ್ದ ಈ ಅವಶೇಷಗಳ ಸುತ್ತಲಿನ ಸ್ಥಳವನ್ನು ಸ್ವಚ್ಛಗೊಳಿಸಿ, ಅವುಗಳು ಕಾಣುವಂತೆ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಇನ್ನೂ 100 ದೇವಾಲಯ ಮತ್ತು ಬಾವಿಗಳನ್ನು ಹೀಗೆ ಅನಾವರಣ ಮಾಡುವ ಕಾರ್ಯಕ್ರಮ ಯೋಜಿಸಲಾಗಿದೆ. ಜತೆಗೆ ಅವುಗಳ ಸಂರಕ್ಷಣೆಗೂ ಚಿಂತನೆ ನಡೆಸಲಾಗಿದೆ’ ಎಂದರು.

‘ಅತ್ಯಂತ ಕಡಿಮೆ ಅವಧಿಯಲ್ಲಿ 1,500 ಪ್ರಾಚ್ಯಾವಶೇಷಗಳನ್ನು ಒಂದೇ ಸ್ಥಳದಲ್ಲಿ ಸಂಗ್ರಹಿಸಿರುವುದು ಅತ್ಯಪರೂಪ. ಹಂಪಿಯ ವ್ಯಾಪ್ತಿಯಲ್ಲಿ ಆರಂಭದಿಂದ ಈವರೆಗೆ ಸುಮಾರು 6,000 ಪ್ರಾಚ್ಯವಸ್ತುಗಳನ್ನಷ್ಟೇ ಸಂಗ್ರಹಿಸಲಾಗಿದೆ. ಆಂಧ್ರಪ್ರದೇಶದ ವಾರಂಗಲ್‌ನಲ್ಲಿ ಒಟ್ಟಾರೆಯಾಗಿ 1,200 ಪ್ರಾಚ್ಯಾವಶೇಷಗಳನ್ನು ಸಂಗ್ರಹಿಸಲಾಗಿದೆ. ಈ ಅಭಿಯಾನ ಮುಂದುವರೆದರೆ ಲಕ್ಕುಂಡಿಯಲ್ಲಿ ಇನ್ನೂ ಹೆಚ್ಚಿನ ಪ್ರಾಚ್ಯಾವಶೇಷಗಳು ದೊರೆಯಬಹುದು’ ಎಂದರು.

# ಭಾರತ-ಯುಎಇ ಒಪ್ಪಂದ ಇಂಧನ ಭದ್ರತೆ ಖಾತರಿಯೇ?

ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ಜತೆಗೆ ಬಹಳ ಹಿಂದಿನಿಂದಲೂ ಹೊಂದಿರುವ ನಂಟನ್ನು ಮತ್ತಷ್ಟು ವಿಸ್ತರಿಸಲು ಭಾರತ ಪ್ರಯತ್ನಿಸುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಇತ್ತೀಚಿನ ಯುಎಇ ಭೇಟಿ ಸಂದರ್ಭದಲ್ಲಿ ಎರಡೂ ರಾಷ್ಟ್ರಗಳು ತೈಲ, ರಕ್ಷಣೆ, ಸರಕು ಸಾಗಣೆಗೆ ಸಂಬಂಧಿಸಿದ ಪ್ರಮುಖ ಒಪ್ಪಂದಗಳನ್ನು ಮಾಡಿಕೊಂಡಿವೆ. ಎಲ್‌ಪಿಜಿ, ಎಲ್‌ಎನ್‌ಜಿ, ಕಚ್ಚಾ ತೈಲ ಸಂಗ್ರಹ ಸಾಮರ್ಥ್ಯ ವೃದ್ಧಿ ಸಂಬಂಧ ನಿರ್ಣಯ ಕೈಗೊಳ್ಳಲಾಗಿದೆ. ಇವು ಭವಿಷ್ಯದಲ್ಲಿ ಭಾರತದ ಪೆಟ್ರೋಲ್, ಎಲ್‌ಪಿಜಿ, ಎಲ್‌ಎನ್‌ಜಿ ಪೂರೈಕೆ ವ್ಯವಸ್ಥೆಯನ್ನು ಬಲಪಡಿಸಿ, ಬಿಕ್ಕಟ್ಟಿನ ಸಂದರ್ಭದಲ್ಲಿ ದೇಶಕ್ಕೆ ನೆರವಾಗಲಿವೆ ಎನ್ನಲಾಗುತ್ತಿದೆ. ಪಶ್ಚಿಮ ಏಷ್ಯಾ ಯುದ್ಧದ ಕಾರಣದಿಂದ ಉಂಟಾಗಿರುವ ಇಂಧನ ಬಿಕ್ಕಟ್ಟಿನ ನಡುವೆಯೇ ಈ ಒಪ್ಪಂದ ನಡೆದಿರುವುದು ಮಹತ್ವ ಪಡೆದಿದೆ. ಒಪ್ಪಂದಗಳ ವಿವರಗಳನ್ನು ಇಲ್ಲಿ ನೀಡಲಾಗಿದೆ

ಆಧಾರ: ಪಿಟಿಐ, ರಾಯಿಟರ್ಸ್, ಪಿಐಬಿ, ಹಣಕಾಸು ಸಚಿವಾಲಯದ ದತ್ತಾಂಶಗಳು, ಮಾಧ್ಯಮ ವರದಿಗಳು

ಪ್ರಜಾವಾಣಿ ವಾರ್ತೆ

ಭಾರತ ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ನಡುವೆ ಉತ್ತಮ ದ್ವಿಪಕ್ಷೀಯ ಸಂಬಂಧ ಇದ್ದು, ಇದಕ್ಕೆ ಶತಮಾನಗಳ ನಂಟಿನ ಇತಿಹಾಸ ಇದೆ. ಎರಡೂ ರಾಷ್ಟ್ರಗಳ ನಡುವೆ ಆಮದು ರಫ್ತು ಇದ್ದು, ಪ್ರಮುಖವಾಗಿ ಇಂಧನ, ಮುತ್ತು, ಖರ್ಜೂರ, ಜವಳಿ ಮತ್ತು ಮೀನು ವ್ಯಾಪಾರವು ನಡೆಯುತ್ತಿದೆ. ಭಾರತೀಯರು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಕೆಲಸ ಅರಸಿ ಹೋಗುವ ದೇಶಗಳಲ್ಲಿ ಯುಎಇ ಕೂಡ ಒಂದಾಗಿದೆ. 1972ರಲ್ಲಿ ಅಬುಧಾಬಿ ಮತ್ತು ದೆಹಲಿಯಲ್ಲಿ ರಾಜತಾಂತ್ರಿಕ ಕಚೇರಿಗಳು ಆರಂಭಗೊಂಡ ನಂತರದಲ್ಲಿ ದ್ವಿಪಕ್ಷೀಯ ಸಂಬಂಧ ಬಲವರ್ಧನೆ ಆಯಿತು.

2015ರಲ್ಲಿ ಪ್ರಧಾನಿ ಮೋದಿ ಅವರ ಭೇಟಿಯೊಂದಿಗೆ ಭಾರತ-ಯುಎಇ ಸಂಬಂಧಕ್ಕೆ ಹೊಸ ಆಯಾಮ ಸಿಕ್ಕಿತ್ತು. ಭಾರತದ ಪ್ರಧಾನಿಯೊಬ್ಬರು 34 ವರ್ಷಗಳ ನಂತರ ಅಬುಧಾಬಿಗೆ ನೀಡಿದ ಭೇಟಿ ಅದಾಗಿತ್ತು. ಮೋದಿ ಅವರು ಪ್ರಧಾನಿ ಆದ ನಂತರ ಯುಎಇಗೆ ಏಳು ಬಾರಿ ಭೇಟಿ ನೀಡಿದರೆ, ಯುಎಇ ಅಧ್ಯಕ್ಷ ಶೇಖ್ ಮೊಹಮ್ಮದ್ ಬಿನ್ ಜಾಯೆದ್ ಅಲ್ ನಹ್ಯಾನ್ ಅವರು ಭಾರತಕ್ಕೆ ಐದು ಬಾರಿ ಭೇಟಿ ನೀಡಿದ್ದಾರೆ. ಯುಎಇ ಈಗ ಭಾರತದ ಅತ್ಯಂತ ಮುಖ್ಯ ತೈಲ ಪೂರೈಕೆ ರಾಷ್ಟ್ರವಾಗಿದ್ದು, ಮೂಲಸೌಕರ್ಯ ಮತ್ತು ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ದೊಡ್ಡ ಹೂಡಿಕೆದಾರನಾಗಿದೆ.

ಪ್ರಸ್ತುತ, ಐದು ರಾಷ್ಟ್ರಗಳ ಪ್ರವಾಸ ಯೋಜನೆಯ ಭಾಗವಾಗಿ ಮೋದಿ ಅವರು ಮೊದಲಿಗೆ (ಮೇ 15ರಂದು) ಯುಎಇಗೆ ಭೇಟಿ ನೀಡಿದ್ದರು. ಈ ವೇಳೆ ಅವರು ಇಂಧನ, ರಕ್ಷಣೆ, ಆರ್ಥಿಕತೆ, ತಾಂತ್ರಿಕತೆ, ಸಾಮಾಜಿಕ ವಲಯಗಳಿಗೆ ಸಂಬಂಧಿಸಿದ ಹಲವು ಮಹತ್ವದ ವಿಷಯಗಳ ಬಗ್ಗೆ ಮಾತುಕತೆ ನಡೆಸಿದರು. ಎರಡೂ ರಾಷ್ಟ್ರಗಳ ನಡುವೆ ಹಲವು ಒಪ್ಪಂದಗಳು ಏರ್ಪಟ್ಟಿದ್ದು, ಎಂಒಯುಗೆ ಸಹಿ ಹಾಕಲಾಗಿದೆ.

ಅಮೆರಿಕ-ಇಸ್ರೇಲ್ ಜಂಟಿಯಾಗಿ ಇರಾನ್ ಮೇಲೆ ಯುದ್ಧ ಸಾರಿದ ನಂತರ ಉಂಟಾಗಿರುವ ಜಾಗತಿಕ ಇಂಧನ ಬಿಕ್ಕಟ್ಟು ಹಾಗೂ ಒಪೆಕ್ ಮತ್ತು ಒಪೆಕ್ + ರಾಷ್ಟ್ರಗಳ ಸಮೂಹದಿಂದ ಯುಎಇ ಹೊರ ಬಂದ ಬಳಿಕ ಭಾರತ ಮತ್ತು ಯುಎಇ ನಡುವೆ ಈ ಒಪ್ಪಂದಗಳು ಏರ್ಪಟ್ಟಿರುವುದು ತುಂಬಾ ಮಹತ್ವ ಪಡೆದಿದೆ. ಕಚ್ಚಾ ತೈಲ, ಎಲ್‌ಪಿಜಿ, ಎಲ್‌ಎನ್‌ಜಿ ಉತ್ಪಾದಿಸುವ ಪ್ರಮುಖ ರಾಷ್ಟ್ರಗಳಲ್ಲಿ ಯುಎಇ ಕೂಡ ಒಂದಾಗಿದ್ದು, ಭಾರತಕ್ಕೆ ತನ್ನ ಇಂಧನ ಭದ್ರತೆಯನ್ನು ಖಾತರಿಪಡಿಸಿಕೊಳ್ಳಲು ಈ ಒಪ್ಪಂದಗಳು ನೆರವಾಗಲಿವೆ ಎನ್ನಲಾಗುತ್ತಿದೆ.

## 1. ತೈಲ ಸಂಗ್ರಹದಲ್ಲಿ ಸಹಭಾಗಿತ್ವ

ಅಮೆರಿಕ, ಚೀನಾ ಮುಂತಾದ ದೇಶಗಳಿಗೆ ಹೋಲಿಸಿದರೆ, ಭಾರತದ ಕಚ್ಚಾ ತೈಲ ಸಂಗ್ರಹ ಸಾಮರ್ಥ್ಯ ಕಡಿಮೆ. ಸದ್ಯ 4 ಕೋಟಿ ಬ್ಯಾರಲ್‌ಗಳಷ್ಟು ಕಚ್ಚಾ ತೈಲ ಸಂಗ್ರಹಿಸುವ ಸಾಮರ್ಥ್ಯವನ್ನಷ್ಟೇ ಭಾರತ ಹೊಂದಿದೆ. ದೇಶದ ಇಂಧನ ಭದ್ರತೆಯ ದೃಷ್ಟಿಯಿಂದ ಕಚ್ಚಾ ತೈಲ ಸಂಗ್ರಹ ವ್ಯವಸ್ಥೆಯನ್ನು ಉತ್ತಮಪಡಿಸಲು ಇಂಡಿಯನ್ ಸ್ಟ್ರಾಟಜಿಕ್ ಪೆಟ್ರೋಲಿಯಂ ರಿಸರ್ವ್ ಲಿಮಿಟೆಡ್ (ಐಎಸ್‌ಪಿಆರ್‌ಎಲ್) ಮತ್ತು ಅಬುಧಾಬಿ ನ್ಯಾಷನಲ್ ಆಯಿಲ್ ಕಂಪನಿ (ಎಡಿಎನ್‌ಒಸಿ) ನಡುವೆ ಸಹಕಾರಕ್ಕೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಈ ಒಪ್ಪಂದದ ಪ್ರಕಾರ, ಆಂಧ್ರ ಪ್ರದೇಶದ ವಿಶಾಖಪಟ್ಟಣದಲ್ಲಿರುವ ತೈಲ ಸಂಗ್ರಹಾಗಾರ ಮತ್ತು ಒಡಿಶಾದ ಚಂಡಿಖೋಲ್‌ನಲ್ಲಿ ನಿರ್ಮಾಣ ಹಂತದಲ್ಲಿರುವ ಸಂಗ್ರಹಾಗಾರಗಳಲ್ಲಿ ಯುಎಇಯ ಎಡಿಎನ್‌ಒಸಿ ಸುಮಾರು 3 ಕೋಟಿ ಬ್ಯಾರಲ್ ತೈಲ ಸಂಗ್ರಹಿಸಲು ಒಪ್ಪಂದಕ್ಕೆ ಬರಲಾಗಿದೆ. ಜತೆಗೆ, ಯುಎಇಯ ಫುಜೈರಾದಲ್ಲಿ ಭಾರತಕ್ಕಾಗಿ ಕಚ್ಚಾ ತೈಲವನ್ನು ಸಂಗ್ರಹಿಸುವ ಬಗ್ಗೆಯೂ ಮಾತುಕತೆ ನಡೆದಿದೆ. ಜತೆಗೆ, ಮತ್ತು ಭಾರತದಲ್ಲಿ ದ್ರವೀಕೃತ ನೈಸರ್ಗಿಕ ಅನಿಲ (ಎಲ್‌ಎನ್‌ಜಿ) ಮತ್ತು ಎಲ್‌ಪಿಜಿ ಸಂಗ್ರಹ ವ್ಯವಸ್ಥೆಯಲ್ಲಿ ಸಹಕಾರ ನೀಡುವ ಬಗ್ಗೆಯೂ ಒಪ್ಪಂದವಾಗಿದೆ.



ಯುಎಇ ಅಧ್ಯಕ್ಷ ಶೇಖ್ ಮೊಹಮ್ಮದ್ ಬಿನ್ ಜಾಯೆದ್ ಅಲ್ ನಹ್ಯಾನ್ ಅವರೊಂದಿಗೆ ಪ್ರಧಾನಿ ನರೇಂದ್ರ ಮೋದಿ ಪಿಟಿಐ ಚಿತ್ರ

## 2. ಎಲ್‌ಪಿಜಿ ಪೂರೈಕೆಗೆ ಒಪ್ಪಂದ

ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿಮಿಟೆಡ್ (ಐಒಸಿಎಲ್) ಮತ್ತು ಯುಎಇಯ ಸರ್ಕಾರಿ ಸ್ವಾಮ್ಯದ ಅಬುಧಾಬಿ ನ್ಯಾಷನಲ್ ಆಯಿಲ್ ಕಂಪನಿ (ಎಡಿಎನ್‌ಒಸಿ) ನಡುವೆ ನಿರಂತರವಾಗಿ ಎಲ್‌ಪಿಜಿ ಪೂರೈಕೆಗೆ ಸಂಬಂಧಿಸಿದಂತೆ ಈ ಒಪ್ಪಂದ ನಡೆದಿದೆ. ಭಾರತವು ಅತಿ ಹೆಚ್ಚು ಪ್ರಮಾಣದ ಎಲ್‌ಪಿಜಿಯನ್ನು ಯುಎಇಯಿಂದ ಆಮದು ಮಾಡಿಕೊಳ್ಳುತ್ತಿದೆ. ಭಾರತದ ಬೇಡಿಕೆಯ ಶೇ 40ರಷ್ಟನ್ನು ಅದು ಪೂರೈಸುತ್ತಿದೆ. ಈ ಒಪ್ಪಂದವು ಎಲ್‌ಪಿಜಿ ವ್ಯಾಪಾರವನ್ನು ಇನ್ನಷ್ಟು ವಿಸ್ತರಿಸಲಿದ್ದು, ಭವಿಷ್ಯದಲ್ಲಿ ದೇಶದ ಬೇಡಿಕೆಗೆ ತಕ್ಕಂತೆ ದೀರ್ಘಾವಧಿಗೆ ಎಲ್‌ಪಿಜಿ ಪೂರೈಕೆಯಾಗಲಿದ್ದು, ಎಲ್‌ಪಿಜಿ ಭದ್ರತೆಯನ್ನು ಇದು ಖಚಿತಪಡಿಸಲಿದೆ ಎಂದು ಸರ್ಕಾರ ಹೇಳಿದೆ.

## 3. ರಕ್ಷಣಾ ಪಾಲುದಾರಿಕೆಯ ಚೌಕಟ್ಟು

ರಕ್ಷಣಾ ಕೈಗಾರಿಕಾ ಕ್ಷೇತ್ರಗಳಲ್ಲಿ ಎರಡೂ ರಾಷ್ಟ್ರಗಳ ನಡುವಿನ ಸಹಕಾರವನ್ನು ಇನ್ನಷ್ಟು ಬಲಪಡಿಸಲು ಈ ಚೌಕಟ್ಟು ನೆರವಾಗಲಿದೆ. ರಕ್ಷಣಾ ಕ್ಷೇತ್ರದಲ್ಲಿ ಜಂಟಿ ಅಭಿವೃದ್ಧಿ, ಜಂಟಿ ಪಾಲುದಾರಿಕೆಗೆ ಇದು ಉತ್ತೇಜನ ನೀಡಲಿದ್ದು, ಕಾರ್ಯತಂತ್ರದ ದೃಷ್ಟಿಯಿಂದ ಮಹತ್ವವಾದ ವಲಯಗಳಲ್ಲಿ ತಂತ್ರಜ್ಞಾನ ಮತ್ತು ಹೊಸ ಆವಿಷ್ಕಾರಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಪರಸ್ಪರ ಹಂಚಿಕೊಳ್ಳಲು ಇದು ನೆರವಾಗಲಿದೆ. ರಾಷ್ಟ್ರೀಯ ಮತ್ತು ಪ್ರಾದೇಶಿಕ ಭದ್ರತೆಗೂ ಇದರಿಂದ ಅನುಕೂಲವಾಗಲಿದೆ.

## 4. ಹಡಗು ದುರಸ್ತಿ ಕ್ಲಸ್ಟರ್ ಸ್ಥಾಪನೆ

ಕೊಚ್ಚಿನ್ ಶಿಪ್‌ಯಾರ್ಡ್ ಲಿಮಿಟೆಡ್ (ಸಿಎಸ್‌ಎಲ್) ಮತ್ತು ಯುಎಇಯ ಡ್ರೈಡಾಕ್ಸ್ ವರ್ಲ್ಡ್ (ಡಿಡಿಡಬ್ಲ್ಯು) ನಡುವೆ ಈ ಒಪ್ಪಂದ ಏರ್ಪಟ್ಟಿದ್ದು, ಇದರ ಅಡಿಯಲ್ಲಿ ಗುಜರಾತ್‌ನ ವಾಡೀನಾರ್‌ನಲ್ಲಿ ಅತ್ಯಾಧುನಿಕ ಹಡಗು ದುರಸ್ತಿ ಕೇಂದ್ರ ನಿರ್ಮಾಣವಾಗಲಿದೆ. ಇದು ಹಡಗುಗಳ ಮೂಲಕ ಸರಕು ಸಾಗಣೆ, ಬಂದರು ಮತ್ತು ಕರಾವಳಿ ಮೂಲಸೌಕರ್ಯ ಅಭಿವೃದ್ಧಿಗೆ ನೆರವಾಗಲಿದೆ ಎಂದು ನಿರೀಕ್ಷಿಸಲಾಗಿದೆ

## 5. ಹಡಗು ದುರಸ್ತಿ ಕೌಶಲ ಅಭಿವೃದ್ಧಿ

ಹಡಗುಗಳ ದುರಸ್ತಿಯ ಕೌಶಲವನ್ನು ಅಭಿವೃದ್ಧಿಪಡಿಸುವ ಉದ್ದೇಶದೊಂದಿಗೆ ಕೊಚ್ಚಿನ್ ಶಿಪ್‌ಯಾರ್ಡ್ ಲಿಮಿಟೆಡ್, ಡ್ರೈಡಾಕ್ಸ್ ವರ್ಲ್ಡ್ ಮತ್ತು ಸೆಂಟರ್ ಆಫ್ ಎಕ್ಸಲೆನ್ಸ್ ಇನ್ ಮಾರಿಟೈಮ್ ಆ್ಯಂಡ್ ಶಿಪ್‌ಬಿಲ್ಡಿಂಗ್ ನಡುವೆ ಒಪ್ಪಂದ ನಡೆದಿದೆ. ಇದರ ಅಡಿಯಲ್ಲಿ, ಹಡಗುಗಳ ನಿರ್ಮಾಣ, ದುರಸ್ತಿ ಮಾಡುವ ಬಗ್ಗೆ ತಾಂತ್ರಿಕ ತರಬೇತಿ, ಕೌಶಲದ ತರಬೇತಿ ಸಿಗಲಿದೆ.


## 6. ಎಕ್ಸಾಫ್ಲಾಪ್ ಸೂಪರ್ ಕಂಪ್ಯೂಟಿಂಗ್ ಕ್ಲಸ್ಟರ್ ಸ್ಥಾಪನೆ

ಭಾರತದಲ್ಲಿ ಎಂಟು ಎಕ್ಸಾಫ್ಲಾಪ್ ಸೂಪರ್ ಕಂಪ್ಯೂಟಿಂಗ್ ಕ್ಲಸ್ಟರ್ ಸ್ಥಾಪನೆ ಮಾಡುವ ಸಂಬಂಧ ಭಾರತದ ಸೆಂಟರ್ ಫಾರ್ ಡೆವಲಪ್‌ಮೆಂಟ್ ಆಫ್ ಅಡ್ವಾನ್ಸ್ಡ್ ಕಂಪ್ಯೂಟಿಂಗ್ (ಸಿಡಿಎಸಿ) ಮತ್ತು ಅಬುಧಾಬಿಯ ತಂತ್ರಜ್ಞಾನ ಕಂಪನಿ ಜಿ42 ನಡುವೆ ಒಪ್ಪಂದ ನಡೆದಿದ್ದು, ಇದು ಭಾರತದ್ದೇ ಆದ ಎಐ ಮತ್ತು ಹೆಚ್ಚು ಕಾರ್ಯಕ್ಷಮತೆ ಹೊಂದಿರುವ ಕಂಪ್ಯೂಟಿಂಗ್ ವ್ಯವಸ್ಥೆ ಹೊಂದುವ ಯತ್ನಕ್ಕೆ ಶಕ್ತಿ ನೀಡಲಿದೆ. ದೇಶದ ಸೂಪರ್ ಕಂಪ್ಯೂಟಿಂಗ್ ಮೂಲಸೌಕರ್ಯಕ್ಕೆ ನೆರವಾಗಲಿದೆ ಎಂದು ಹೇಳಲಾಗಿದೆ.

## 7. ಐನೂರು ಕೋಟಿ ಡಾಲರ್ ಬಂಡವಾಳ ಹೂಡಿಕೆ

ಭಾರತದ ಮೂಲಸೌಕರ್ಯ ಮತ್ತು ಹಣಕಾಸು ಸಂಸ್ಥೆಗಳಲ್ಲಿ 500 ಕೋಟಿ ಡಾಲರ್‌ನಷ್ಟು (ಸುಮಾರು ₹48 ಸಾವಿರ ಕೋಟಿ) ಹೂಡಿಕೆ ಸಂಬಂಧ ಮಾತುಕತೆ ನಡೆದಿದೆ. ಎಮಿರೇಟ್ಸ್ ಎನ್‌ಬಿಡಿ ಬ್ಯಾಂಕ್ ಭಾರತದ ಆರ್‌ಬಿಎಲ್ ಬ್ಯಾಂಕ್‌ನಲ್ಲಿ, ಅಬುಧಾಬಿ ಇನ್‌ವೆಸ್ಟ್‌ಮೆಂಟ್ ಅಥಾರಿಟಿ ಭಾರತದ ನ್ಯಾಷನಲ್ ಇನ್‌ಫ್ರಾಸ್ಟ್ರಕ್ಚರ್ ಇನ್‌ವೆಸ್ಟ್‌ಮೆಂಟ್ ಫಂಡ್‌ನಲ್ಲಿ ಮತ್ತು ಇಂಟರ್‌ನ್ಯಾಷನಲ್ ಹೋಲ್ಡಿಂಗ್ ಕಂಪನಿಯು ಸಮ್ಮಾನ್ ಕ್ಯಾಪಿಟಲ್ ಆಫ್ ಇಂಡಿಯಾದಲ್ಲಿ ಹೂಡಿಕೆ ಮಾಡುವ ನಿರ್ಣಯ ಕೈಗೊಳ್ಳಲಾಗಿದೆ.

### ಭಾರತ ಮತ್ತು ಯುಎಇ ಸರಕು ವ್ಯಾಪಾರ (ಲಕ್ಷ ಕೋಟಿಗಳಲ್ಲಿ)




| ವರ್ಷ | ಭಾರತ ಮಾಡಿಕೊಂಡ ಆಮದು | ಮಾಡಿದ ರಫ್ತು | ವ್ಯತ್ಯಾಸ |
|---|---|---|---|
| 2020-21 | ₹1.96 | ₹1.23 | |
| 2021-22 | ₹3.34 | ₹2.09 | -₹1.25 |
| 2022-23 | ₹4.27 | ₹2.53 | -₹1.74 |
| 2023-24 | ₹3.97 | ₹2.95 | -₹1.02 |
| 2024-25 | ₹5.36 | ₹3.10 | -₹2.26 |

### ಭಾರತ ಮತ್ತು ಯುಎಇ ಸಂಬಂಧ

- ಯುಎಇ ಭಾರತದ ಮೂರನೇ ಅತಿ ದೊಡ್ಡ ವ್ಯಾಪಾರ ಪಾಲುದಾರ ರಾಷ್ಟ್ರ. ವಿದೇಶಿ ಬಂಡವಾಳ ಹೂಡಿಕೆಯಲ್ಲಿ ಏಳನೇ ಅತಿದೊಡ್ಡ ಪಾಲುದಾರ
- ಕಚ್ಚಾ ತೈಲ, ಎಲ್‌ಪಿಜಿ, ಎಲ್‌ಎನ್‌ಜಿ ಸೇರಿದಂತೆ ತನ್ನ ಇಂಧನ ಭದ್ರತೆಗಾಗಿ ಭಾರತವು ಯುಎಇಯನ್ನು ಅವಲಂಬಿಸಿದೆ. ರಫ್ತು ಮಾಡುವುದಕ್ಕಿಂತಲೂ ಹೆಚ್ಚು, ಅಲ್ಲಿಂದ ಆಮದು ಮಾಡಿಕೊಳ್ಳುತ್ತಿರುವುದರಿಂದ, ಅದರೊಂದಿಗೆ ಭಾರತದ ವ್ಯಾಪಾರ ಕೊರತೆ ಹೆಚ್ಚಿದೆ
- ವರ್ಷದಿಂದ ವರ್ಷಕ್ಕೆ ದ್ವಿಪಕ್ಷೀಯ ವ್ಯಾಪಾರದಲ್ಲಿ ಗಣನೀಯ ಏರಿಕೆ ಕಂಡುಬರುತ್ತಿದ್ದು, 2025-26ರಲ್ಲಿ ದ್ವಿಪಕ್ಷೀಯ ವ್ಯಾಪಾರದ ಮೌಲ್ಯ 10,125 ಕೋಟಿ ಡಾಲರ್ (₹9.72 ಲಕ್ಷ ಕೋಟಿ) ದಾಟಿದ್ದು, 2032ರ ವೇಳೆಗೆ 20 ಸಾವಿರ ಕೋಟಿ ಡಾಲರ್ (₹19.44 ಲಕ್ಷ ಕೋಟಿ) ತಲುಪಿಸುವ ಗುರಿ ಹೊಂದಲಾಗಿದೆ
- 2000 ಏಪ್ರಿಲ್‌ನಿಂದ 2025ರ ನಡುವೆ ಯುಎಇ ಭಾರತದಲ್ಲಿ ಹೂಡಿಕೆ ಮಾಡಿರುವ ಮೊತ್ತ 2,519 ಕೋಟಿ ಡಾಲರ್ (₹2.41 ಲಕ್ಷ ಕೋಟಿ)
- ಕಚ್ಚಾ ತೈಲ ಪೂರೈಸುವ (ಪ್ರತಿ ದಿನ 2.5 ಲಕ್ಷದಿಂದ 3 ಲಕ್ಷ ಬ್ಯಾರಲ್) ನಾಲ್ಕನೇ, ಎಲ್‌ಎನ್‌ಜಿ ಪೂರೈಸುವ (ವಾರ್ಷಿಕವಾಗಿ 31 ಲಕ್ಷದಿಂದ 35 ಲಕ್ಷ ಟನ್) ಮೂರನೇ ರಾಷ್ಟ್ರವಾಗಿದ್ದರೆ, ಭಾರತಕ್ಕೆ ಗರಿಷ್ಠ ಪ್ರಮಾಣದ ಎಲ್‌ಪಿಜಿ (ಶೇ 40ರಷ್ಟು) ಯುಎಇಯಿಂದಲೇ ಬರುತ್ತದೆ
- ಭಾರತದ 45 ಲಕ್ಷ ಜನರು ಯುಎಇಯಲ್ಲಿ ನೆಲಸಿದ್ದಾರೆ




### ತಪ್ಪಲಿದೆಯೆ ಹೊರ್ಮುಜ್ ಅವಲಂಬನೆ?

ಇತರ ಅರಬ್ ರಾಷ್ಟ್ರಗಳಂತೆ ಯುಎಇ ಕೂಡ ಪೆಟ್ರೋಲಿಯಂ, ಎಲ್‌ಪಿಜಿ ಸೇರಿದಂತೆ ಇನ್ನಿತರ ಉತ್ಪನ್ನಗಳನ್ನು ರಫ್ತು ಮಾಡಲು ಹೊರ್ಮುಜ್ ಜಲಸಂಧಿಯನ್ನೇ ಅವಲಂಬಿಸಿದೆ. ಏಷ್ಯಾದ ಪೂರ್ವ ದೇಶಗಳಿಗೆ ಉತ್ಪನ್ನಗಳನ್ನು ರಫ್ತು ಮಾಡಲು ಅದಕ್ಕೆ ಈ ಜಲಸಂಧಿಯನ್ನು ಅವಲಂಬಿಸದೇ ಇರಲು ಸಾಧ್ಯವಿದೆ. ಯಾಕೆಂದರೆ ಯುಎಇಯ ಪೂರ್ವ ಭಾಗದಲ್ಲಿನ ಸ್ವಲ್ಪ ಭೂಪ್ರದೇಶ ಹೊರ್ಮುಜ್ ಜಲಸಂಧಿಗೆ ಹೊಂದಿಕೊಂಡಿಲ್ಲ. ಅಲ್ಲಿನ ಬಂದರು ನಗರಿ ಫುಜೈರಾವು ಈ ಜಲಸಂಧಿಯಿಂದ ದೂರ ಇದೆ. ಈ ಬಂದರಿನ ಮೂಲಕ ಯುಎಇಯು ಭಾರತ ಸೇರಿದಂತೆ ಏಷ್ಯಾದ ಪೂರ್ವಕ್ಕಿರುವ ರಾಷ್ಟ್ರಗಳಿಗೆ ನೇರವಾಗಿ ರಫ್ತು ಮಾಡಬಹುದು.

ಯುಎಇಯು ಈಗಾಗಲೇ ತನ್ನ ಪಶ್ಚಿಮ ಭಾಗದಿಂದ ಪೂರ್ವ ಭಾಗದಲ್ಲಿರುವ ಫುಜೈರಾ ಬಂದರಿಗೆ ತೈಲ ಪೂರೈಸುವ ಪೈಪ್‌ಲೈನ್ ಹೊಂದಿದೆ. ಪ್ರತಿ ದಿನ 18 ಲಕ್ಷ ಬ್ಯಾರಲ್‌ನಷ್ಟು ತೈಲ ಸಾಗಿಸುವ ಸಾಮರ್ಥ್ಯವನ್ನು ಇದು ಹೊಂದಿದೆ. ಹೊರ್ಮುಜ್ ಜಲಸಂಧಿಯ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವ ಉದ್ದೇಶದಿಂದ ಈ ಪೈಪ್‌ಲೈನ್ ಸಾಮರ್ಥ್ಯವನ್ನು ದುಪ್ಪಟ್ಟುಗೊಳಿಸಲು ಯುಎಇ ಆಡಳಿತ ನಿರ್ಧರಿಸಿದ್ದು, ಕಾಮಗಾರಿಯನ್ನು ಆರಂಭಿಸಿದೆ. 2027ರ ವೇಳೆಗೆ ಹೊಸ ಪೈಪ್‌ಲೈನ್ ಬಳಕೆಗೆ ಮುಕ್ತವಾಗಲಿದೆ. ಈ ಯೋಜನೆ ಅನುಷ್ಠಾನವಾದರೆ, ಭಾರತಕ್ಕೂ ಅನುಕೂಲವಾಗಲಿದೆ. ಹೊರ್ಮುಜ್‌ನಲ್ಲಿ ಮತ್ತೆ ಬಿಕ್ಕಟ್ಟು ಸೃಷ್ಟಿಯಾದರೂ, ಫುಜೈರಾ ಬಂದರಿನ ಮೂಲಕ ಭಾರತಕ್ಕೆ ಕಚ್ಚಾ ತೈಲ ಪೂರೈಸಬಹುದು.

## ವೇಟ್‌ಲಿಫ್ಟಿಂಗ್: ಭಾರತಕ್ಕೆ 11ನೇ ಸ್ಥಾನ

ಗಾಂಧಿನಗರ (ಪಿಟಿಐ): ಭಾನುವಾರ ಇಲ್ಲಿ ಮುಕ್ತಾಯಗೊಂಡ ಏಷ್ಯನ್ ಸೀನಿಯರ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಭಾರತವು 11 ಪದಕಗಳೊಂದಿಗೆ ಪದಕ ಪಟ್ಟಿಯಲ್ಲಿ 11ನೇ ಸ್ಥಾನ ಪಡೆಯಿತು.

ಭಾರತ ಒಂದು ಬೆಳ್ಳಿ ಮತ್ತು 10 ಕಂಚು ಪದಕಗಳನ್ನು ಗೆದ್ದುಕೊಂಡಿತು. 21 ಚಿನ್ನ, 12 ಬೆಳ್ಳಿ ಮತ್ತು 8 ಕಂಚು ಸೇರಿದಂತೆ 41 ಪದಕ ಗೆದ್ದ ಚೀನಾ ಚೀನಾ ಅಗ್ರಸ್ಥಾನದೊಂದಿಗೆ ಅಭಿಯಾನ ಮುಗಿಸಿತು. 30 ಪದಕ ಗೆದ್ದ ಉತ್ತರ ಕೊರಿಯಾ (18 ಚಿನ್ನ, 11 ಬೆಳ್ಳಿ, 1 ಕಂಚು) ಎರಡನೇ ಸ್ಥಾನ ಪಡೆಯಿತು.

## ಸಿನ್ನರ್‌ಗೆ 'ಇಟಾಲಿಯನ್ ಓಪನ್' ಕಿರೀಟ

ರೋಮ್ (ಎಎಫ್‌ಪಿ): ವಿಶ್ವದ ಅಗ್ರಮಾನ್ಯ ಸಿಂಗಲ್ಸ್ ಆಟಗಾರ ಯಾನಿಕ್ ಸಿನ್ನರ್ ಅವರು ಭಾನುವಾರ ಇಟಾಲಿಯನ್ ಓಪನ್ ಟೆನಿಸ್ ಟೂರ್ನಿಯ ಫೈನಲ್‌ನಲ್ಲಿ ಕ್ಯಾಸ್ಪರ್ ರೂಡ್ ಅವರನ್ನು ಮಣಿಸಿ, ದಾಖಲೆಯ ಸತತ ಆರನೇ 'ಮಾಸ್ಟರ್ಸ್ 1000' ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು.

ಫೈನಲ್ ಹಣಾಹಣಿಯಲ್ಲಿ ಸಿನ್ನರ್ 6-4, 6-4 ಸೆಟ್‌ಗಳಿಂದ ನಾರ್ವೆಯ ರೂಡ್ ಅವರನ್ನು ಮಣಿಸಿದರು. ಆ ಹಾದಿಯಲ್ಲಿ 'ಮಾಸ್ಟರ್ಸ್ 1000' ಟೂರ್ನಿಗಳಲ್ಲಿ ಸತತ 34 ಗೆಲುವು ದಾಖಲಿಸಿದ ದಾಖಲೆಯನ್ನು ಉತ್ತಮಪಡಿಸಿದರು.

ಆ್ಯಡ್ರಿಯಾನೊ ಪನಾಟ್ಟಾ ನಂತರ ಈ ಕಿರೀಟ ಗೆದ್ದ ಇಟಲಿಯ ಮೊದಲ ಆಟಗಾರ ಎಂಬ ಹಿರಿಮೆಗೂ ಸಿನ್ನರ್



ಪಾತ್ರರಾದರು. 50 ವರ್ಷಗಳ ಹಿಂದೆ ಆ್ಯಡ್ರಿಯಾನೊ ಪ್ರಶಸ್ತಿ ಗೆದ್ದಿದ್ದರು. 24 ವರ್ಷದ ಸಿನ್ನರ್, ಎಟಿಪಿಯ ಎಲ್ಲಾ ಉನ್ನತ ರ‍್ಯಾಂಕ್‌ನ ಟೂರ್ನಿಗಳನ್ನು ಗೆದ್ದು 'ಗೋಲ್ಡನ್ ಮಾಸ್ಟರ್ಸ್' ಅನ್ನು ಪೂರ್ಣಗೊಳಿಸಿದರು.

### ಥಾಯ್ಲೆಂಡ್ ಓಪನ್: ಇಂಡೊನೇಷ್ಯಾದ ಲಿಯೋ–ಮಾರ್ಟಿನ್ ಜೋಡಿಗೆ ಪ್ರಶಸ್ತಿ

# ಸಾತ್ವಿಕ್–ಚಿರಾಗ್ ರನ್ನರ್ಸ್ ಅಪ್

ಬ್ಯಾಂಕಾಕ್ (ಪಿಟಿಐ): ಭಾರತದ ಸ್ಟಾರ್ ಜೋಡಿ ಸಾತ್ವಿಕ್‌ಸಾಯಿ-ರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಥಾಯ್ಲೆಂಡ್ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಡಬಲ್ಸ್‌ನಲ್ಲಿ ರನ್ನರ್ಸ್ ಅಪ್‌ನೊಂದಿಗೆ ಅಭಿಯಾನ ಮುಗಿಸಿದರು.

ಭಾನುವಾರ ನಡೆದ ಫೈನಲ್ ಹಣಾಹಣಿಯಲ್ಲಿ ಅಗ್ರ ಶ್ರೇಯಾಂಕದ ಸಾತ್ವಿಕ್-ಚಿರಾಗ್ 12-21, 23-25ರಿಂದ ಇಂಡೊನೇಷ್ಯಾದ ಲಿಯೋ ರೋಲಿ ಕಾರ್ನಾಂಡೊ ಮತ್ತು ಡೇನಿಯಲ್ ಮಾರ್ಟಿನ್ ಅವರಿಗೆ ಸೋತರು. ಆರಂಭದ ಗೇಮ್‌ನಲ್ಲಿ ಭಾರತದ ಆಟಗಾರರು ಲಯಕ್ಕೆ ಪರದಾಡಿದರು. ಆದರೆ, ಎರಡನೇ ಗೇಮ್‌ನಲ್ಲಿ ಒತ್ತಡದ ಮಧ್ಯೆ ಉತ್ತಮ ಮಾನಸಿಕ ಸ್ಥೈರ್ಯವನ್ನು ಪ್ರದರ್ಶಿಸಿದರು.

ವಿಶ್ವದ ನಾಲ್ಕನೇ ಕ್ರಮಾಂಕದ ಸಾತ್ವಿಕ್- ಚಿರಾಗ್ ಅವರಿಗೆ ಇದು ಈ ಋತುವಿನ ಮೊದಲ ಫೈನಲ್ ಆಗಿತ್ತು. 2019 ಮತ್ತು 2024ರಲ್ಲಿ ಪ್ರಶಸ್ತಿ ಗೆದ್ದಿದ್ದ ಭಾರತದ ಆಟಗಾರರು ಇಲ್ಲಿ ಮೂರನೇ ಬಾರಿ ಕಿರೀಟ ಗೆಲ್ಲುವ ಪ್ರಯತ್ನದಲ್ಲಿದ್ದರು. ಆದರೆ, ಇಂಡೊನೇಷ್ಯಾದ ಆಟಗಾರರು ಪಾರಮ್ಯ ಸಾಧಿಸಿದರು. ಒಟ್ಟು ₹4.55 ಕೋಟಿ ಬಹುಮಾನ ಮೊತ್ತದ ಟೂರ್ನಿ ಇದಾಗಿತ್ತು.



ಪ್ರಶಸ್ತಿ ಗೆದ್ದ ಇಂಡೊನೇಷ್ಯಾದ ಡೇನಿಯಲ್ ಮಾರ್ಟಿನ್ ಮತ್ತು ಲಿಯೋ ರೋಲಿ ಕಾರ್ನಾಂಡೊ (ಬಲ). ರನ್ನರ್ಸ್ ಅಪ್ ಆದ ಭಾರತದ ಚಿರಾಗ್ ಶೆಟ್ಟಿ ಮತ್ತು ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ ಎಎಫ್‌ಪಿ ಚಿತ್ರ

ಕಳೆದ ವರ್ಷ ಚೀನಾ ಮಾಸ್ಟರ್ಸ್ ಮತ್ತು ಹಾಂಗ್‌ಕಾಂಗ್ ಓಪನ್‌ನಲ್ಲಿ ರನ್ನರ್ಸ್ ಅಪ್ ಆಗಿದ್ದ ಭಾರತದ ಜೋಡಿ, ಈ ಬಾರಿ ಸಾತ್ವಿಕ್ ಅವರ ಭುಜದ ಗಾಯದಿಂದಾಗಿ ಕೆಲ ಟೂರ್ನಿಗಳನ್ನು ತಪ್ಪಿಸಿಕೊಂಡಿತ್ತು. ಆದರೆ, ಕಳೆದ ತಿಂಗಳು ಥಾಮಸ್ ಕಪ್‌ನಲ್ಲಿ ಉತ್ತಮ ಪ್ರದರ್ಶನ ನೀಡಿತ್ತು, ಇದರಿಂದಾಗಿ ಭಾರತ ತಂಡವು ಕಂಚಿನ ಪದಕದ ಸಾಧನೆ ಮಾಡಿತ್ತು.

'ಫೈನಲ್ ಫಲಿತಾಂಶ ಹೊರತುಪಡಿಸಿ, ಈ ವಾರ ನಾವು ಆಡಿದ ರೀತಿ ಸಮಾಧಾನ ತಂದಿದೆ. ಫೈನಲ್ ಪಂದ್ಯದಲ್ಲಿ ಸೋಲಿಗೆ ಕಾರಣವಾದ ಅಂಶಗಳ ಬಗ್ಗೆ ಪರಾಮರ್ಶೆ ನಡೆಸುತ್ತೇವೆ' ಎಂದು ಸಾತ್ವಿಕ್ ಪ್ರತಿಕ್ರಿಯಿಸಿದರು.

ಇಂಡೊನೇಷ್ಯಾದ ಆಟಗಾರರು ಇದೇ ಮೊದಲ ಬಾರಿ ಸಾತ್ವಿಕ್-ಚಿರಾಗ್ ವಿರುದ್ಧ ಗೆಲುವು ಸಾಧಿಸಿತು. ಈ ಹಿಂದಿನ ನಾಲ್ಕು ಮುಖಾಮುಖಿಗಳಲ್ಲಿ ಭಾರತದ ಜೋಡಿಯೇ ಪಾರಮ್ಯ ಮೆರೆದಿತ್ತು.



# ಎಬೋಲಾ, ಹಂಟಾ ವೈರಸ್ ತಂದ ಆತಂಕ

ಕೋವಿಡ್–19ರ ದುಃಸ್ವಪ್ನಗಳು ಜನರನ್ನು ಕಾಡುತ್ತಿರುವಾಗಲೇ ಜಾಗತಿಕ ಮಟ್ಟದಲ್ಲಿ ಮತ್ತೊಂದು ವೈರಸ್ ಕಾಣಿಸಿಕೊಂಡಿದೆ. ಅದು ಎಬೋಲಾ. ವಿಶ್ವ ಆರೋಗ್ಯ ಸಂಸ್ಥೆಯು ಮತ್ತೊಮ್ಮೆ ಆರೋಗ್ಯ ತುರ್ತುಪರಿಸ್ಥಿತಿ ಘೋಷಿಸಿದೆ. ಆಫ್ರಿಕಾದ ಕಾಂಗೊ ರಿಪಬ್ಲಿಕ್ ಮತ್ತು ಉಗಾಂಡದಲ್ಲಿ ಪ್ರಸ್ತುತ ಸೋಂಕಿತರು ಪತ್ತೆಯಾಗಿದ್ದಾರೆ. ಸೋಂಕಿತರ ಜೀವಕ್ಕೆ ಅಪಾಯವಿರುವ ಸಾಧ್ಯತೆ ಹೆಚ್ಚಾಗಿರುವ ಎಬೋಲಾ ಪ್ರಕರಣಗಳು ವರದಿಯಾಗಿರುವುದು 'ಅಸಾಮಾನ್ಯ ವಿದ್ಯಮಾನ' ಎಂದು ಸಂಸ್ಥೆ ಹೇಳಿದೆ. ಇದೇ ವೇಳೆ ಹಂಟಾ ವೈರಸ್ ಸೋಂಕು ಕೂಡ ದೃಢಪಟ್ಟಿರುವುದು ಕಳವಳ ಮೂಡಿಸಿದೆ

ಪ್ರಜಾವಾಣಿ ವಾರ್ತೆ

ಜಾಗತಿಕ ಮಟ್ಟದಲ್ಲಿ ಆಗಾಗ ಸದ್ದು ಮಾಡಿ ಮರೆಯಾಗುತ್ತಿದ್ದ ಎಬೋಲಾ ಮತ್ತೊಮ್ಮೆ ಬಂದಿದೆ. ಕಾಂಗೊ ಗಣರಾಜ್ಯ (ಡೆಮಾಕ್ರಟಿಕ್ ರಿಪಬ್ಲಿಕ್ ಆಫ್ ಕಾಂಗೊ) ಮತ್ತು ಉಗಾಂಡದಲ್ಲಿ ಎಬೋಲಾ ಸೋಂಕಿತರು ಪತ್ತೆಯಾಗಿದ್ದಾರೆ. ಅದರ ಕ್ಷಿಪ್ರ ಹರಡುವಿಕೆ ಮತ್ತು ಮಾರಣಾಂತಿಕ ಸ್ವರೂಪದ ಕಾರಣಕ್ಕೆ ವಿಶ್ವ ಆರೋಗ್ಯ ಸಂಸ್ಥೆಯು (ಡಬ್ಲ್ಯುಎಚ್‌ಒ) ಇದು ಸಾಂಕ್ರಾಮಿಕ ಅಲ್ಲದಿದ್ದರೂ, ಜಾಗತಿಕ ಮಟ್ಟದಲ್ಲಿ ಗಮನ ಹರಿಸಬೇಕಾದ ಸಾರ್ವಜನಿಕ ಆರೋಗ್ಯ ತುರ್ತುಪರಿಸ್ಥಿತಿ (ಪಿಎಚ್‌ಇಐಸಿ) ಎಂದು ಘೋಷಿಸಿದೆ.

ಆಫ್ರಿಕನ್ ಸೆಂಟರ್ಸ್ ಫಾರ್ ಡಿಸೀಸ್ ಕಂಟ್ರೋಲ್ ಆ್ಯಂಡ್ ಪ್ರಿವೆನ್ಷನ್ (ಸಿಡಿಸಿ) ಪ್ರಕಾರ, ಎಬೋಲಾ ಸೋಂಕು ಕಳೆದ ತಿಂಗಳಲ್ಲೇ ಕಾಂಗೊದ ವ್ಯಕ್ತಿಯೊಬ್ಬರಲ್ಲಿ ಕಾಣಿಸಿಕೊಂಡಿದೆ. 59 ವರ್ಷದ ಆ ವ್ಯಕ್ತಿಗೆ ಏ.24ರಂದು ಸೋಂಕು ತಗುಲಿರುವುದು ಖಚಿತವಾಗಿತ್ತು, ಅದಾದ ಮೂರೇ ದಿನಕ್ಕೆ ಆತ ಮೃತಪಟ್ಟಿದ್ದ, ತಕ್ಷಣವೇ ಆರೋಗ್ಯ ಅಧಿಕಾರಿಗಳು ಜಾಗೃತಿ ಮೂಡಿಸುವ ಕೆಲಸ ಆರಂಭಿಸಿದ್ದರು. ಆದರೆ, ಅಷ್ಟು ಹೊತ್ತಿಗೆ ಸೋಂಕು ಹರಡಿತ್ತು, ಮೇ 5ರ ಹೊತ್ತಿಗೆ 50 ಮಂದಿ ಎಬೋಲಾದಿಂದ ಉಸಿರು ಚೆಲ್ಲಿದ್ದರು. ಸೋಂಕಿನಿಂದ ಈವರೆಗೆ 91 ಮಂದಿ ಮರಣ ಹೊಂದಿದ್ದು, 350 ಶಂಕಿತ ಪ್ರಕರಣಗಳು ಪತ್ತೆಯಾಗಿವೆ ಎಂದು ಕಾಂಗೊದ ಆರೋಗ್ಯ ಇಲಾಖೆ ತಿಳಿಸಿದೆ.

ಕಾಂಗೊದೊಂದಿಗೆ ಗಡಿ ಹಂಚಿಕೊಂಡಿರುವ ಉಗಾಂಡಕ್ಕೂ ಸೋಂಕು ಹರಡಿದೆ. ಅಲ್ಲಿ ಇಬ್ಬರು ಸೋಂಕಿತರು ಪತ್ತೆಯಾಗಿದ್ದು, ಒಬ್ಬರು ಸಾವಿಗೀಡಾಗಿದ್ದಾರೆ. ಕಾಂಗೊದ ಪ್ರಮುಖ ನಗರ ಕಿನ್‌ಶಾಸಾ ಮತ್ತು ಉಗಾಂಡ ರಾಜಧಾನಿ ಕಂಪಾಲಾದಲ್ಲಿ

## ಹೇಗೆ ಹರಡುತ್ತದೆ?

- ಬಾವಲಿಯಂಥ ಪಕ್ಷಿಗಳು, ಪ್ರಾಣಿಗಳಿಂದ ಇದು ಮನುಷ್ಯರಿಗೆ ಹರಡುತ್ತದೆ
- ಸೋಂಕಿತರ ವಾಂತಿ, ರಕ್ತ, ವೀರ್ಯದಂಥ ಸ್ರಾವಗಳ ಮೂಲಕ ಒಬ್ಬರಿಂದ ಒಬ್ಬರಿಗೆ ಹರಡುತ್ತದೆ
- ಜ್ವರ, ಮಾಂಸಖಂಡಗಳ ನೋವು, ತಲೆನೋವು, ಆಯಾಸ ಮುಂತಾದ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ
- ವಾಂತಿ, ಭೇದಿ, ಚರ್ಮದ ಮೇಲೆ ದದ್ದುಗಳು, ರಕ್ತಸ್ರಾವ ಇತರ ಪ್ರಮುಖ ಲಕ್ಷಣಗಳು

ಇದು ಮೊದಲಿಗೆ ಪತ್ತೆಯಾಗಿತ್ತು (1976). ಎಬೋಲಾ ನದಿಗೆ ಹೊಂದಿಕೊಂಡ ಪ್ರದೇಶದಲ್ಲಿ ಇದು ಮೊದಲು ಪತ್ತೆಯಾಗಿದ್ದರಿಂದ ಎಬೋಲಾ ವೈರಸ್ ಎಂದೇ ಹೆಸರು ಪಡೆಯಿತು. ಅತ್ಯಂತ ಕ್ಷಿಪ್ರವಾಗಿ ಹರಡುವ ಗುಣವುಳ್ಳ ಎಬೋಲಾ, ಮಾರಣಾಂತಿಕ ಸೋಂಕು. 1976ರಿಂದ 40 ಬಾರಿ ಪ್ರಕರಣಗಳು ಕಾಣಿಸಿಕೊಂಡಿವೆ. ಕಾಂಗೊದಲ್ಲಿ 17ನೇ ಬಾರಿ ಸೋಂಕು ಪತ್ತೆಯಾಗಿದೆ. ಕಳೆದ ವರ್ಷ ಕೂಡ ಎಬೋಲಾ ಸೋಂಕುಗಳು ಕಾಣಿಸಿಕೊಂಡಿದ್ದವು; 53 ಪ್ರಕರಣಗಳು ದೃಢವಾಗಿ, 45 ಮಂದಿ ಸಾವಿಗೀಡಾಗಿದ್ದರು.

## ಆತಂಕ ಏಕೆ?

ಜೈರ್, ಸುಡಾನ್, ಬುಂಡಿಬುಗ್ಯೊ ಎನ್ನುವ ಮೂರು ಪ್ರಮುಖ ವೈರಸ್ ರೂಪಾಂತರಗಳು ಸೋಂಕು ಉಂಟುಮಾಡುತ್ತವೆ. ಇವುಗಳಲ್ಲಿ ಬುಂಡಿಬುಗ್ಯೊ ಅಪರೂಪದ ಆದರೆ, ಅತ್ಯಂತ ಅಪಾಯಕಾರಿಯಾದ



## ಹಂಟಾ ವೈರಸ್ ಹರಡಿದ್ದು ಹೇಗೆ?

ವಿಶ್ವ ಆರೋಗ್ಯ ಸಂಸ್ಥೆಯು ಜಾಗತಿಕ ಮಟ್ಟದಲ್ಲಿ ಎಚ್ಚರಿಕೆ ನೀಡಲು ಕಾರಣವಾಗಿರುವ ಹಂಟಾ ವೈರಸ್ ಸೋಂಕು ದಿಢೀರ್ ಆಗಿ ಕಂಡುಬಂದಿರುವುದು ಒಂದು ವಿಲಾಸಿ ಹಡಗಿನಲ್ಲಿ.

28 ರಾಷ್ಟ್ರಗಳ 150 ಪ್ರಯಾಣಿಕರು ಮತ್ತು ಇಬ್ಬರು ವೈದ್ಯಕೀಯ ಸಿಬ್ಬಂದಿ ಸೇರಿದಂತೆ 25 ಮಂದಿ ಸಿಬ್ಬಂದಿಯನ್ನೊಳಗೊಂಡ ನೆದರ್ಲೆಂಡ್ಸ್‌ನ ಖಾಸಗಿ ವಿಹಾರಿ ಹಡಗು ಎಂವಿ ಹೋಂಡಿಯಸ್ ಏಪ್ರಿಲ್ 1ರಂದು ಅರ್ಜೆಂಟೀನಾದ ಉಷುವಾಯದಿಂದ ಹೊರಟಿತ್ತು, ಪ್ರಯಾಣದ ಮಧ್ಯೆ, ನೆದರ್ಲೆಂಡ್ಸ್‌ನ ದಂಪತಿ ಮತ್ತು ಜರ್ಮನಿಯ ಮಹಿಳೆಯೊಬ್ಬರು ಮೃತಪಟ್ಟರು. ಅವರ ರಕ್ತದ ಮಾದರಿಯನ್ನು ಪರೀಕ್ಷೆಗೆ ಒಳಪಡಿಸಿದಾಗ ಮೂವರ ಪೈಕಿ ಇಬ್ಬರಿಗೆ ಹಂಟಾ ವೈರಸ್ ಸೋಂಕು ತಗುಲಿದ್ದು ಖಚಿತವಾಗಿತ್ತು. ಇದು ದೃಢಪಡುವಾಗ ಮೇ 2 ಆಗಿತ್ತು, ಇಲ್ಲಿಯವರೆಗೆ ಹಡಗಿನಲ್ಲಿದ್ದ 10 ಮಂದಿಗೆ ಹಂಟಾ ವೈರಸ್ ಸೋಂಕು ತಗುಲಿರುವುದು ದೃಢಪಟ್ಟಿದ್ದು, ಇನ್ನಿಬ್ಬರು ಅದರ ರೋಗಲಕ್ಷಣಗಳಿಂದ ಬಳಲುತ್ತಿದ್ದು, ಶಂಕಿತ ಪ್ರಕರಣಗಳೆಂದು ಗುರುತಿಸಲಾಗಿದೆ.

## ಏನಿದು ವೈರಸ್?

14 ಜನ, ಕೆನಡಾದ ಆರು, ಜರ್ಮನಿಯ ನಾಲ್ವರು ಸೇರಿದಂತೆ ವಿವಿಧ ದೇಶಗಳ ಪ್ರಯಾಣಿಕರು ಈಗ ಅವರ ದೇಶಗಳಲ್ಲಿ ಕ್ವಾರಂಟೈನ್‌ನಲ್ಲಿದ್ದಾರೆ. ತನ್ನ ಒಬ್ಬ ಪ್ರಜೆಗೆ ಸೋಂಕು ತಗುಲಿರುವುದನ್ನು ಫ್ರಾನ್ಸ್ ದೃಢಪಡಿಸಿದೆ. ಆ್ಯಂಡೀಸ್ ವೈರಸ್ ಮನುಷ್ಯರಿಂದ ಮನುಷ್ಯರಿಗೆ ಹರಡುವುದರಿಂದ ಎಚ್ಚರಿಕೆ ವಹಿಸುವಂತೆ ಆರೋಗ್ಯ ಸಂಸ್ಥೆ ಸಲಹೆ ನೀಡಿದೆ.

ಅರ್ಜೆಂಟೀನಾ ಎಪ್ಯುಯೆನ್‌ನಲ್ಲಿ 2018 ಡಿಸೆಂಬರ್ 2019ರ ಮಾರ್ಚ್ ನಡುವೆ 34 ಮಂದಿಗೆ ಈ ಸೋಂಕು ತಗುಲಿತ್ತು, ಈ ಪೈಕಿ 11 ಮಂದಿ ಮೃತಪಟ್ಟಿದ್ದರು.

## ರೋಗ ಲಕ್ಷಣಗಳೇನು?

ವೈರಸ್‌ನ ಸೋಂಕಿನಿಂದಾಗಿ ಎರಡು ರೀತಿಯ ಗಂಭೀರ ಕಾಯಿಲೆಗಳು ಕಾಡುತ್ತವೆ. ಅಮೆರಿಕ ಖಂಡದ ರಾಷ್ಟ್ರಗಳಲ್ಲಿ ಹಂಟಾವೈರಸ್ ಕಾರ್ಡಿಯೋಪಲ್ಮನರಿ ಸಿಂಡ್ರೋಮ್ (ಎಚ್‌ಸಿಪಿಎಸ್) ಕಂಡು ಬರುತ್ತದೆ. ಇದು ಶ್ವಾಸಕೋಶಕ್ಕೆ ಸಂಬಂಧಿಸಿದ ಗಂಭೀರ ಆರೋಗ್ಯ ಸಮಸ್ಯೆಯಾಗಿದ್ದು, ಇದರಲ್ಲಿ ಸಾವಿನ ಪ್ರಮಾಣ ಶೇ 50ರಷ್ಟಿದೆ. ಯುರೋಪ್ ಮತ್ತು ಏಷ್ಯಾ ಖಂಡಗಳಲ್ಲಿ ಹಂಟಾವೈರಸ್ ಹೆಮರಾಜಿಕ್ ಫೀವರ್ ವಿದ್

ಸೋಂಕಿತರು ಪತ್ತೆಯಾಗಿರುವುದು ಆತಂಕಕ್ಕೆ ಕಾರಣವಾಗಿದೆ. ಕಾಂಗೋದಲ್ಲಿರುವ ಆರು ಮಂದಿ ಅಮೆರಿಕ ಪ್ರಜೆಗಳಿಗೆ ಸೋಂಕು ತಗುಲಿದೆ ಎನ್ನಲಾಗುತ್ತಿದ್ದು, ಅವರನ್ನು ಸುರಕ್ಷಿತ ಸ್ಥಳದಲ್ಲಿ ಕ್ವಾರಂಟೈನ್ ಮಾಡಲಾಗಿದೆ ಎಂದು ಅಮೆರಿಕದ ಸೆಂಟರ್ ಫಾರ್ ಡಿಸೀಸ್ ಕಂಟ್ರೋಲ್ ಮತ್ತು ಪ್ರಿವೆನ್ಷನ್ ತಿಳಿಸಿದೆ. ಜತೆಗೆ, ಕಾಂಗೋಗೆ ಪ್ರಯಾಣಿಸದಿರುವಂತೆ ಪ್ರವಾಸಿಗರಿಗೆ ಗಂಭೀರ ಎಚ್ಚರಿಕೆ ನೀಡಿದೆ. ಕಾಂಗೋ ಮತ್ತು ಉಗಾಂಡದ ಗಡಿಗಳಲ್ಲಿ ಪ್ರಯಾಣಿಕರಿಗೆ ಆರೋಗ್ಯ ಪರೀಕ್ಷೆ ನಡೆಸುವಂತೆ ಡಬ್ಲ್ಯುಎಚ್ಒ ಸಲಹೆ ನೀಡಿದೆ.

## ಏನಿದು ಎಬೋಲಾ?

ಎಬೋಲಾ ಸೋಂಕಿಗೆ ಕಾರಣ, ಆರ್ಥೋಎಬೋಲಾವೈರಸ್ ಎನ್ನುವ ವೈರಸ್ ಸಮೂಹ. ದಕ್ಷಿಣ ಸುಡಾನ್ ಮತ್ತು ಕಾಂಗೋದಲ್ಲಿ ತಳಿಯಾಗಿದೆ. 2007 ಮತ್ತು 2012ರಲ್ಲಿ ಇದೇ ತಳಿಯಿಂದ ಎಬೋಲಾ ಸೋಂಕು ಹರಡಿತ್ತು. 2007ರಲ್ಲಿ 149 ಸೋಂಕಿತರ ಪೈಕಿ 37 ಮಂದಿ ಅಸುನೀಗಿದ್ದರು. 2012ರಲ್ಲಿ 57 ಸೋಂಕಿತರ ಪೈಕಿ 29 ಮಂದಿ ಸಾವಿಗೀಡಾಗಿದ್ದರು. ಬಂಡಿಬುಗ್ಯೊ ತಳಿಯಿಂದ ಹರಡುವ ಎಬೋಲಾ ಸೋಂಕಿಗೆ ಲಸಿಕೆ ಇಲ್ಲ. ಎಬೋಲಾಗೆ ಬಳಸುತ್ತಿರುವ ಲಸಿಕೆಯು ಈ ವೈರಸ್ ರೂಪಾಂತರಕ್ಕೆ ಕೆಲಸ ಮಾಡದಿರುವುದೇ ಪ್ರಸ್ತುತ ಹೆಚ್ಚು ಆತಂಕಕ್ಕೆ ಕಾರಣವಾಗಿದೆ. ಹೀಗಾಗಿಯೇ ಇದು ಅಸಾಮಾನ್ಯ ಸಂದರ್ಭ ಎಂದು ಡಬ್ಲ್ಯುಎಚ್ಒ ಹೇಳಿರುವುದು.

ಆರ್ಥಿಕ, ಭೌಗೋಳಿಕ ಸಮಸ್ಯೆ ಸೇರಿದಂತೆ ಹಲವು ರೀತಿಯ ಬಿಕ್ಕಟ್ಟುಗಳನ್ನು ಎದುರಿಸುತ್ತಿರುವ ಕಾಂಗೊ ಮತ್ತು ಮಧ್ಯ ಆಫ್ರಿಕಾ-ಪೂರ್ವ ಆಫ್ರಿಕಾದಲ್ಲಿ ಆರೋಗ್ಯ ಸೇವೆಗಳ ಮೂಲಸೌಕರ್ಯವು ಉತ್ತಮ ಸ್ಥಿತಿಯಲ್ಲಿಲ್ಲ. ಇದು ಕೂಡ ಆತಂಕಕ್ಕೆ ಕಾರಣವಾಗಿದೆ.

## ಭಾರತಕ್ಕೆ ಅಪಾಯವಿದೆಯೇ?

ಎಬೋಲಾ ಸೋಂಕು ಆಫ್ರಿಕಾದ ಹೊರಗೂ ಸೋಂಕು ಹರಡುವ ಸಾಧ್ಯತೆ ಇದೆ. ಆದರೆ, ಭಾರತೀಯರು ಆತಂಕಗೊಳ್ಳುವ ಅಗತ್ಯವಿಲ್ಲ ಎಂದು ತಜ್ಞರು ಹೇಳಿದ್ದಾರೆ.

ಸೋಂಕು ಕಾಣಿಸಿಕೊಂಡಿರುವ ದೇಶಗಳಿಂದ ಭಾರತಕ್ಕೆ ವಿಮಾನ ಸೇವೆಗಳು ಲಭ್ಯವಿಲ್ಲ. ಜತೆಗೆ, ಭಾರತದಲ್ಲಿ ಎಬೋಲಾ ಸೋಂಕು ಹರಡುವಿಕೆ ತಡೆಯುವ ಸಂಬಂಧದ ಮಾರ್ಗಸೂಚಿಗಳನ್ನು ಅನುಸರಿಸಲಾಗುತ್ತಿದೆ. ಪ್ರಯಾಣಿಕರ ಪರೀಕ್ಷೆ, ಪ್ರತ್ಯೇಕವಾಗಿಡುವಿಕೆ ಚಾಲ್ತಿಯಲ್ಲಿದ್ದು, ಜಾಗತಿಕ ಆರೋಗ್ಯ ಸಂಸ್ಥೆಗಳ ಜತೆ ನಿರಂತರ ಸಂಪರ್ಕ ಹೊಂದಲಾಗಿದೆ.

ಕೋವಿಡ್‌ನಂತೆ ಇದು ಸುಲಭವಾಗಿ ಹರಡುವುದಿಲ್ಲ ಎನ್ನುವುದೂ ಒಂದು ಸಕಾರಾತ್ಮಕ ಅಂಶವಾಗಿದೆ. ಆದರೆ, ಜಗತ್ತೇ ಒಂದು ಗ್ರಾಮದಂತಾಗಿರುವ ಪ್ರಸ್ತುತ ಸನ್ನಿವೇಶದಲ್ಲಿ ಯಾವುದನ್ನೂ ನಿರ್ಲಕ್ಷಿಸುವಂತಿಲ್ಲ ಎನ್ನುವ ಎಚ್ಚರಿಕೆಯನ್ನೂ ತಜ್ಞರು ನೀಡಿದ್ದಾರೆ.

ಹಂಟಾ ವೈರಸ್ ಸೋಂಕು ಹರಡಿದ ವಿಲಾಸಿ ಹಡಗಿನಲ್ಲಿ ಭಾರತೀಯರು ಇದ್ದ ಬಗ್ಗೆ ಈ ವರೆಗೆ ವರದಿಯಾಗಿಲ್ಲ. ಹಾಗಾಗಿ, ಭಾರತಕ್ಕೆ ಇದು ಹರಡುವ ಸಾಧ್ಯತೆ ಕಡಿಮೆ. ವಿದೇಶದಲ್ಲಿ ಈ ಸೋಂಕು ತಗುಲಿದವರ ಸಂಪರ್ಕಕ್ಕೆ ಭಾರತೀಯರು ಬಂದು, ಅವರು ಸ್ವದೇಶಕ್ಕೆ ಮರಳಿದ ನಂತರ ಹರಡುವ ಸಾಧ್ಯತೆಯನ್ನು ತಳ್ಳಿಹಾಕಲಾಗದು. ಹಾಗಾಗಿ, ಎಚ್ಚರಿಕೆ ಅಗತ್ಯ ಎಂಬುದು ತಜ್ಞರ ಅಭಿಪ್ರಾಯ.

ಆಧಾರ: ವಿಶ್ವ ಆರೋಗ್ಯ ಸಂಸ್ಥೆ ವೆಬ್‌ಸೈಟ್, ಎಎಫ್‌ಪಿ, ರಾಯಿಟರ್ಸ್, ಬಿಬಿಸಿ, ಸಿಡಿಸಿ.ಜಿಒವಿ, ಗಾರ್ಡಿಯನ್

ಇದು ಹೊಸ ವೈರಸ್ ಏನಲ್ಲ. ಇಲಿಗಳಲ್ಲಿ ಕಂಡು ಬರುವ ವೈರಸ್‌ಗಳ ಗುಂಪಿದು. ದಕ್ಷಿಣ ಅಮೆರಿಕದ ರಾಷ್ಟ್ರಗಳಲ್ಲಿ ಇದು ಸಾಮಾನ್ಯ. ಸಾಮಾನ್ಯವಾಗಿ ಇಲಿಗಳ ಸಂಪರ್ಕಕ್ಕೆ ಬಂದ (ಇಲಿಯ ಎಂಜಲು, ಮೂತ್ರ, ಮಲದ ಸಂಪರ್ಕಕ್ಕೆ ಬಂದರೆ) ಮನುಷ್ಯರಿಗೆ ಈ ವೈರಸ್ ಹರಡುತ್ತದೆ. ಮನುಷ್ಯರಿಂದ ಮನುಷ್ಯರಿಗೆ ಹರಡುವುದು ಅಪರೂಪ. ಆದರೆ, ಆ್ಯಂಡೀಸ್ ವೈರಸ್ ಎಂಬ ರೂಪಾಂತರ ತಳಿ ಮನುಷ್ಯರಿಂದ ಮನುಷ್ಯರಿಗೆ ಹರಡುವ ಸಾಮರ್ಥ್ಯ ಹೊಂದಿದೆ. ವಿಲಾಸಿ ಹಡಗಿನಲ್ಲಿದ್ದ ಸೋಂಕಿತರಲ್ಲಿ ಈ ವೈರಸ್ ಇರುವುದು ದೃಢಪಟ್ಟಿದೆ.




## ಈಗೇಕೆ ಕಳವಳ?

ಹಡಗಿನಲ್ಲಿ 28 ರಾಷ್ಟ್ರಗಳ ಪ್ರಯಾಣಿಕರಿದ್ದರು. ಏಪ್ರಿಲ್ 23ರಂದು ಸೇಂಟ್ ಹಲೇನಾದಲ್ಲಿ ವಿವಿಧ ದೇಶಗಳ 23 ಪ್ರಯಾಣಿಕರು ಹಡಗಿನಿಂದ ಇಳಿದು ತಮ್ಮ ದೇಶಗಳಿಗೆ ವಾಪಸ್ ಆಗಿದ್ದಾರೆ. ಮೇ 2ರಂದು ವೈರಸ್ ಹರಡಿರುವುದು ಖಚಿತವಾದ ನಂತರ ಮೇ 10, 11ರಂದು ಉಳಿದೆಲ್ಲ ಪ್ರಯಾಣಿಕರನ್ನು ಕೆನರಿ ದ್ವೀಪದಲ್ಲಿ ಇಳಿಸಿ, ಅವರವರ ದೇಶಗಳಿಗೆ ಕಳುಹಿಸಲಾಗಿತ್ತು.

20 ಬ್ರಿಟಿಷರು, 18 ಅಮೆರಿಕನ್ನರು, ಸ್ಪೇನಿನ

ರೀನಲ್ ಸಿಂಡ್ರೋಮ್ (ಎಚ್‌ಎಫ್‌ಆರ್‌ಎಸ್) ಎಂಬ ಕಾಯಿಲೆ ಕಾಣಿಸಿಕೊಳ್ಳುತ್ತದೆ. ಇದು ಮೂತ್ರಪಿಂಡ ವೈಫಲ್ಯಕ್ಕೂ ಕಾರಣವಾಗಬಹುದು.

ಸೋಂಕು ತಗುಲಿದವರಲ್ಲಿ ಒಂದು ವಾರದಿಂದ ಎಂಟು ವಾರಗಳ ನಡುವೆ ರೋಗ ಲಕ್ಷಣ ಕಾಣಿಸುತ್ತದೆ. ಇದಕ್ಕೆ ಔಷಧಿ ಇಲ್ಲ. ರೋಗ ಲಕ್ಷಣ ಆಧಾರದಲ್ಲಿ ಚಿಕಿತ್ಸೆ ನೀಡಲಾಗುತ್ತದೆ.

**ಹಂಟಾವೈರಸ್ ಕಾರ್ಡಿಯೋಪಲ್ಮನರಿ ಸಿಂಡ್ರೋಮ್ (ಎಚ್‌ಸಿಪಿಎಸ್):** ಸುಸ್ತು, ಜ್ವರ, ಬೆನ್ನು, ತೊಡೆ, ಪೃಷ್ಠದ ಸ್ನಾಯುಗಳಲ್ಲಿ ನೋವು, ತಲೆನೋವು, ತಲೆ ತಿರುಗುವುದು, ಚಳಿ, ವಾಂತಿ, ಭೇದಿ, ಹೊಟ್ಟೆ ನೋವು, ತೀವ್ರ ಕೆಮ್ಮು, ಉಸಿರಾಟದ ತೊಂದರೆ ಕಾಣಿಸುತ್ತದೆ.

**ಹಂಟಾವೈರಸ್ ಹೆಮರಾಜಿಕ್ ಫೀವರ್ ವಿದ್ ರೀನಲ್ ಸಿಂಡ್ರೋಮ್:** ಸಾಮಾನ್ಯ ರೋಗ ಲಕ್ಷಣಗಳು ಒಂದರಿಂದ ಎರಡು ವಾರಗಳಲ್ಲಿ ಗೋಚರಿಸುತ್ತವೆ. ಕೆಲವು ಬಾರಿ ಎರಡು ತಿಂಗಳಾದರೂ ಆಗಬಹುದು.

ತೀವ್ರ ತಲೆನೋವು, ಬೆನ್ನು ಮತ್ತು ಹೊಟ್ಟೆನೋವು, ಜ್ವರ/ತೀವ್ರ ಚಳಿ, ದೃಷ್ಟಿ ಮಂಜಾಗುವುದು, ವಾಕರಿಕೆ ಬರುವುದು, ಕಣ್ಣು ಕೆಂಪಾಗುವುದು ಅಥವಾ ಚರ್ಮದಲ್ಲಿ ಕೆಂಪು ಗುಳ್ಳೆಗಳು ಕಾಣಿಸಿಕೊಳ್ಳಬಹುದು. ನಂತರದಲ್ಲಿ ರಕ್ತದೊತ್ತಡದ ಕುಸಿತ, ರಕ್ತದ ಹರಿವಿನ ಕೊರತೆ, ಆಂತರಿಕ ರಕ್ತಸ್ರಾವ, ಕಿಡ್ನಿ ವೈಫಲ್ಯ ಸಂಭವಿಸಬಹುದು.

### ಪಶ್ಚಿಮ ಏಷ್ಯಾ, ಉಕ್ರೇನ್ ಬಿಕ್ಕಟ್ಟು ಇತ್ಯರ್ಥಕ್ಕೆ ಪ್ರಧಾನಿ ಮೋದಿ ಸಲಹೆ

# ‘ಸೇನಾ ಕಾರ್ಯಾಚರಣೆಯಿಂದ ಶಾಂತಿ ಸಾಧ್ಯವಿಲ್ಲ’

ಓಸ್ಲೊ (ಪಿಟಿಐ): ‘ಪಶ್ಚಿಮ ಏಷ್ಯಾದಲ್ಲಿನ ಯುದ್ಧ ಇರಬಹುದು ಅಥವಾ ಉಕ್ರೇನ್‌ನಲ್ಲಿ ನಡೆಯುತ್ತಿರುವ ಯುದ್ಧ ಇರಬಹುದು. ಸೇನಾ ಕಾರ್ಯಾಚರಣೆಗಳಿಂದ ಮಾತ್ರವೇ ಶಾಂತಿ ಪಡೆದುಕೊಳ್ಳುವುದು ಸಾಧ್ಯವಿಲ್ಲ. ಈ ಎರಡೂ ಯುದ್ಧಗಳು ಶೀಘ್ರದಲ್ಲಿಯೇ ಕೊನೆಗೊಳ್ಳಬೇಕು’ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ನಾರ್ವೆ ಪ್ರಧಾನಿ ಜೋನಸ್ ಗರ್ ಸ್ಟೋರ್ ಅವರೊಂದಿನ ದ್ವಿಪಕ್ಷೀಯ ಮಾತುಕತೆ ಬಳಿಕ ನಡೆದ ಜಂಟಿ ಸುದ್ದಿಗೋಷ್ಠಿಯಲ್ಲಿ ಪ್ರಧಾನಿ ಮೋದಿ ಮಾತನಾಡಿ, ‘ಪಶ್ಚಿಮ ಏಷ್ಯಾ ಮತ್ತು ಉಕ್ರೇನ್ ಯುದ್ಧಗಳು ಶೀಘ್ರದಲ್ಲಿಯೇ ಕೊನೆಗೊಂಡು ಶಾಂತಿ ಸ್ಥಾಪಿಸಲು ನಡೆಸಲಾಗುವ ಎಲ್ಲಾ ಪ್ರಯತ್ನವನ್ನು ನಾವು (ಭಾರತ ಮತ್ತು ನಾರ್ವೆ) ಬೆಂಬಲಿಸುತ್ತೇವೆ’ ಎಂದರು.

‘ರಾಜತಾಂತ್ರಿಕ ವ್ಯವಸ್ಥೆಯಲ್ಲಿ ಭಾರತ ಮತ್ತು ನಾರ್ವೆ ನಂಬಿಕೆ ಇರಿಸಿದೆ. ಯಾವುದೇ ವಿಚಾರಕ್ಕಾದರೂ ಸರಿ, ಸೇನಾ ಕಾರ್ಯಾಚರಣೆಯಿಂದ ಮಾತ್ರವೇ ಪರಿಹಾರ ದೊರಕುವುದಿಲ್ಲ ಎನ್ನುವುದನ್ನು ನಾವು ಒಪ್ಪುತ್ತೇವೆ’ ಎಂದರು.

‘ಜಗತ್ತು ಈಗ ಅನಿಶ್ಚಿತತೆಯಿಂದ ಕೂಡಿದೆ.



ಪ್ರಧಾನಿ ನರೇಂದ್ರ ಮೋದಿ ಅವರಿಗೆ ನಾರ್ವೆ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿ ‘ಗ್ರ್ಯಾಂಡ್ ಕ್ರಾಸ್ ಆಫ್ ದಿ ರಾಯಲ್ ನಾರ್ವೇಜಿಯನ್ ಆರ್ಡರ್ ಆಫ್ ಮೆರಿಟ್’ ಅನ್ನು ನೀಡಿ ಗೌರವಿಸಲಾಯಿತು.

ಹೆಚ್ಚುತ್ತಿರುವ ಜಾಗತಿಕ ಸವಾಲುಗಳನ್ನು ಪರಿಹರಿಸಲು ಜಾಗತಿಕ ಸಂಸ್ಥೆಗಳಲ್ಲಿ ಸುಧಾರಣೆಯಾಗಬೇಕು. ಭಯೋತ್ಪಾದನೆಯನ್ನು ಬುಡದಿಂದಲೇ ಕಿತ್ತು ಹಾಕಬೇಕು ಎಂಬುವುದು ನಮ್ಮ (ಭಾರತ ಮತ್ತು ನಾರ್ವೆ) ಬದ್ಧತೆಯಾಗಿದೆ’ ಎಂದು ಅಭಿಪ್ರಾಯಪಟ್ಟರು.

**ನಾರ್ವೆಯ ಅತ್ಯುನ್ನತ ನಾಗರಿಕ ಗೌರವ:** ಪ್ರಧಾನಿ ನರೇಂದ್ರ ಮೋದಿ ಅವರಿಗೆ ನಾರ್ವೆ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿ ‘ಗ್ರ್ಯಾಂಡ್ ಕ್ರಾಸ್ ಆಫ್ ದಿ ರಾಯಲ್ ನಾರ್ವೇಜಿಯನ್ ಆರ್ಡರ್ ಆಫ್ ಮೆರಿಟ್’ ಅನ್ನು ನೀಡಿ ಗೌರವಿಸಲಾಗಿದೆ.

ಇದು ಪ್ರಧಾನಿ ಮೋದಿ ಅವರಿಗೆ ದೊರೆತ 32ನೇ ಅಂತರರಾಷ್ಟ್ರೀಯ ಗೌರವವಾಗಿದೆ. ಕಳೆದ 43 ವರ್ಷಗಳಲ್ಲಿ ಭಾರತೀಯ ಪ್ರಧಾನಿಯೊಬ್ಬರು ನಾರ್ವೆಗೆ ಮೊದಲ ಬಾರಿ ಭೇಟಿ ನೀಡಿದ್ದಾರೆ.

**ಡ್ರೋನ್ ದಾಳಿಗೆ ಭಾರತ ಆತಂಕ (ನವದೆಹಲಿ ವರದಿ):** ಯುಎಇಯ ಬರಕಾ ಪರಮಾಣು ವಿದ್ಯುತ್ ಸ್ಥಾವರವನ್ನು ಗುರಿಯಾಗಿಸಿ ನಡೆದ ದಾಳಿಯನ್ನು ಖಂಡಿಸಿರುವ ಭಾರತ, ‘ಈ ದಾಳಿ ಪಶ್ಚಿಮ ಏಷ್ಯಾ ಸಂಘರ್ಷವನ್ನು ಮತ್ತಷ್ಟು ತೀವ್ರಗೊಳಿಸಲಿದೆ’ ಎಂದು ಆತಂಕ ವ್ಯಕ್ತಪಡಿಸಿದೆ.

‘ಈ ರೀತಿಯ ದಾಳಿಗಳು ಸ್ವೀಕಾರಾರ್ಹವಲ್ಲ. ಅವು ಹಾನಿ ಹೆಚ್ಚಳಕ್ಕೂ ಕಾರಣವಾಗಲಿವೆ’ ಎಂದು ಭಾರತದ ವಿದೇಶಾಂಗ ವ್ಯವಹಾರಗಳ ಇಲಾಖೆ ಹೇಳಿದೆ.

# ಆರ್‌ಟಿಐ ವ್ಯಾಪ್ತಿಗಿಲ್ಲ ಬಿಸಿಸಿಐ

ಪ್ರಜಾವಾಣಿ ವಾರ್ತೆ

ನವದೆಹಲಿ: ವಿಶ್ವದ ಶ್ರೀಮಂತ ಕ್ರಿಕೆಟ್ ಸಂಸ್ಥೆಯಾಗಿರುವ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯು (ಬಿಸಿಸಿಐ) ಯಾವುದೇ ಕಾನೂನು ಅಥವಾ ಸರ್ಕಾರದ ಅನುದಾನದಡಿ ಸ್ಥಾಪಿತವಾಗಿರುವ 'ಸಾರ್ವಜನಿಕ ಪ್ರಾಧಿಕಾರ'ವಲ್ಲದ ಕಾರಣ ಅದು ಮಾಹಿತಿ ಹಕ್ಕು (ಆರ್‌ಟಿಐ) ವ್ಯಾಪ್ತಿಗೆ ಬರುವುದಿಲ್ಲ ಎಂದು ಕೇಂದ್ರ ಮಾಹಿತಿ ಆಯೋಗ (ಸಿಐಸಿ) ಸೋಮವಾರ ಆದೇಶ ನೀಡಿದೆ.

ಕ್ರಿಕೆಟ್ ಮಂಡಳಿ ಕೂಡ 'ಸಾರ್ವಜನಿಕ ಪ್ರಾಧಿಕಾರ'ವಾಗಿದ್ದು, ಆರ್‌ಟಿಐ ವ್ಯಾಪ್ತಿಗೆ ಬರುತ್ತದೆ ಎಂದು ಸಿಐಸಿ 2018ರ ಅಕ್ಟೋಬರ್‌ನಲ್ಲಿ ನೀಡಿದ್ದ ಆದೇಶ ಪ್ರಶ್ನಿಸಿ ಬಿಸಿಸಿಐ ಮೇಲ್ಮನವಿ ಸಲ್ಲಿಸಿತ್ತು. ಅರ್ಜಿಯ ವಿಚಾರಣೆ ನಡೆಸಿದ್ದ ಮದ್ರಾಸ್ ಹೈಕೋರ್ಟ್ ಪ್ರಕರಣವನ್ನು ಸಿಐಸಿಗೆ ಮರಳಿಸಿತ್ತು. ಈ ನಡುವೆ, ಮಾಹಿತಿ ಆಯುಕ್ತ ಪಿ.ಆರ್. ರಮೇಶ್ ಈ ಆದೇಶ ನೀಡಿದ್ದಾರೆ.

2025ರಲ್ಲಿ ರಾಷ್ಟ್ರೀಯ ಕ್ರೀಡಾ ಆಡಳಿತ ಮಸೂದೆಗೆ ತಿದ್ದುಪಡಿ ತರುವ ಮೂಲಕ ಕೇಂದ್ರ ಸರ್ಕಾರವು ಬಿಸಿಸಿಐ ಅನ್ನು ಆರ್‌ಟಿಐ ವ್ಯಾಪ್ತಿಗೆ ಬರುವ ಪ್ರಸ್ತಾವವನ್ನು ಕೈಬಿಟ್ಟಿತ್ತು. ಸರ್ಕಾರಿ ಅನುದಾನ ಪಡೆಯುವ ಕ್ರೀಡಾ ಮಂಡಳಿ ಮಾತ್ರ ಪಾರದರ್ಶಕತೆಯ ವ್ಯಾಪ್ತಿಗೆ ಬರುತ್ತದೆ ಎಂದು ಕಾನೂನಿಗೆ ತಿದ್ದುಪಡಿ ತಂದಿತ್ತು.

ರಾಜ್ಯ ಸರ್ಕಾರದ ಮೇಲ್ವಿಚಾರಣೆ ಅಥವಾ ನಿಯಂತ್ರಣದ ಆಧಾರದಲ್ಲಿ ಸಂಸ್ಥೆಯನ್ನು ಆರ್‌ಟಿಐ ಅಡಿಯಲ್ಲಿ ಸಾರ್ವಜನಿಕ ಪ್ರಾಧಿಕಾರ ಎಂದು ಪರಿಗಣಿಸಲು ಸಾಧ್ಯವಿಲ್ಲ. ಸರ್ಕಾರಕ್ಕೆ ಸಂಸ್ಥೆಗೆ ಅಧಿಕಾರಿಗಳನ್ನು ನೇಮಕ ಮಾಡಲು ಅಥವಾ ಅದರ ಆಂತರಿಕ ಕಾರ್ಯನಿರ್ವಹಣೆಯಲ್ಲಿ ಯಾವುದೇ ಅಧಿಕಾರವಿಲ್ಲ ಎಂದು ಆಯುಕ್ತರು ತೀರ್ಪಿನಲ್ಲಿ ಸ್ಪಷ್ಟಪಡಿಸಿದ್ದಾರೆ.

ಬಿಸಿಸಿಐ ತನ್ನ ಮಾಧ್ಯಮ ಹಕ್ಕುಗಳು, ಪ್ರಾಯೋಜಕತ್ವ ಮತ್ತು ಟಿಕೆಟ್ ಮಾರಾಟದಂತಹ ವಾಣಿಜ್ಯ ಚಟುವಟಿಕೆಗಳ ಮೂಲಕ ತನ್ನ ಆದಾಯವನ್ನು ಸ್ವತಂತ್ರವಾಗಿ ಪಡೆದುಕೊಳ್ಳುತ್ತಿದೆ. ಇದು ಆರ್ಥಿಕವಾಗಿ ಸ್ವಾವಲಂಬಿಯಾಗಿದೆ ಮತ್ತು ಸರ್ಕಾರಿ ನಿಧಿಯನ್ನು ಅವಲಂಬಿಸಿಲ್ಲ. ಆದ್ದರಿಂದ, ಸರ್ಕಾರವು ಬಿಸಿಸಿಐಗೆ ಹಣಕಾಸಿನ ನೆರವು ಒದಗಿಸುತ್ತಿದೆ ಎಂದು ಹೇಳಲಾಗುವುದಿಲ್ಲ ಎಂದು ಆದೇಶದಲ್ಲಿ ತಿಳಿಸಿದ್ದಾರೆ.

# ವ್ಯಗ್ರ ನಾಯಿ ಕೊಲ್ಲಿ: 'ಸುಪ್ರೀಂ'

## ಆದೇಶ ಮಾರ್ಪಾಡು ಮಾಡಲು ಕೋರಿದ್ದ ಅರ್ಜಿಗಳ ವಜಾ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದಲ್ಲಿ ಬೀದಿನಾಯಿಗಳ ಕಡಿತ ಪ್ರಕರಣಗಳು ಏರಿಕೆ ಆಗುತ್ತಿರುವ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದ ಸುಪ್ರೀಂ ಕೋರ್ಟ್, ಆಕ್ರಮಣಕಾರಿ ನಾಯಿಗಳನ್ನು ಕೊಲ್ಲಬಹುದು ಎಂದು ಮಹತ್ವದ ತೀರ್ಪು ನೀಡಿದೆ.



### ದೀರ್ಘಕಾಲದ ನಿಷ್ಕ್ರಿಯತೆ ಸಮಸ್ಯೆಗೆ ಕಾರಣ

ರಾಜ್ಯ ಸರ್ಕಾರಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಎಬಿಸಿ ನಿಯಮಗಳನ್ನು ಆರಂಭದಿಂದಲೇ ಶಿಸ್ತಿನಿಂದ ಜಾರಿಗೊಳಿಸಿದ್ದಲ್ಲಿ, ಸಕಾಲಿಕ ಮತ್ತು ಹಂತಹಂತದ ಸಂತಾನಶಕ್ತಿ ಹರಣ ಪ್ರಕ್ರಿಯೆ, ಲಸಿಕೆ ನೀಡುವಿಕೆ ಮತ್ತು ಸೂಕ್ತ ಸಾಂಸ್ಥಿಕ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸಿದ್ದಲ್ಲಿ, ಇಂದು ಪರಿಸ್ಥಿತಿ ಇಷ್ಟೊಂದು ಗಂಭೀರವಾಗುತ್ತಿರಲಿಲ್ಲ. ದೀರ್ಘಕಾಲದ ನಿಷ್ಕ್ರಿಯತೆ ಮತ್ತು ಎಬಿಸಿ ನಿಯಮಗಳ ಪರಿಣಾಮಕಾರಿ ಜಾರಿಗೆ ಬದ್ಧತೆಯ ಕೊರತೆಯು ಸಮಸ್ಯೆ ಬಿಗಡಾಯಿಸುವಲ್ಲಿ ಕೊಡುಗೆ ನೀಡಿದೆಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಆಸ್ಪತ್ರೆಗಳು, ಶಾಲೆಗಳು, ಬಸ್ ಹಾಗೂ ರೈಲು ನಿಲ್ದಾಣಗಳು, ಕ್ರೀಡಾ ಸಂಕೀರ್ಣಗಳಂತಹ ಸಾರ್ವಜನಿಕ ಸ್ಥಳಗಳಿಂದ ತೆರವುಗೊಳಿಸಿದ ಬೀದಿನಾಯಿಗಳನ್ನು ಆಶ್ರಯತಾಣಗಳಿಗೆ ಸ್ಥಳಾಂತರಿಸಬೇಕೆಂದು 2025ರ ನವೆಂಬರ್ 7ರಂದು ನೀಡಿದ್ದ ಆದೇಶ ಮಾರ್ಪಡಿಸಲು ನ್ಯಾಯಪೀಠ ಮಂಗಳವಾರ ನಿರಾಕರಿಸಿತು.

ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್, ಸಂದೀಪ್ ಮೆಹ್ತಾ ಮತ್ತು ಎನ್.ವಿ.ಅಂಜಾರಿಯಾ ಅವರನ್ನು ಒಳಗೊಂಡ ತ್ರಿಸದಸ್ಯ ಪೀಠವು, ನ್ಯಾಯಾಲಯದ ಆದೇಶ ಮಾರ್ಪಾಡು ಕೋರಿ ಸಲ್ಲಿಕೆಯಾಗಿದ್ದ ಅರ್ಜಿಗಳನ್ನು ವಜಾಗೊಳಿಸಿತು. ಅಪಾಯಕಾರಿ ನಾಯಿಗಳ ಕೊಲ್ಲುವ ಪ್ರಕ್ರಿಯೆಯನ್ನು ನಿಯಮಾನುಸಾರ ನಡೆಸಲು ಅಧಿಕಾರಿಗಳಿಗೆ ನ್ಯಾಯಪೀಠ ಅನುಮತಿ ನೀಡಿತು.

ಬೀದಿನಾಯಿಗಳ ಸಂಖ್ಯೆ ಅಪಾಯಕಾರಿ ಪ್ರಮಾಣದಲ್ಲಿ ಹೆಚ್ಚಿರುವ, ನಾಯಿ ಕಡಿತದ ಘಟನೆಗಳು ಹೆಚ್ಚು ವರದಿಯಾಗುವ ಮತ್ತು ಜನರ ಸುರಕ್ಷತೆಗೆ ಅಪಾಯ ಇರುವ ಸ್ಥಳಗಳಲ್ಲಿ 1960ರ ಪ್ರಾಣಿಗಳ ಮೇಲಿನ ಕ್ರೌರ್ಯ ತಡೆ ಕಾಯ್ದೆ ಮತ್ತು 2023ರ ಪ್ರಾಣಿ ಜನನ ನಿಯಂತ್ರಣ ನಿಯಮಗಳ ಕಟ್ಟುನಿಟ್ಟಿನ ಪಾಲನೆ ಮತ್ತು ಪರಿಣತ ಪಶು ತಜ್ಞರ ಅಭಿಪ್ರಾಯಗಳ ಆಧಾರದ ಮೇಲೆ ಈ ಪ್ರಕ್ರಿಯೆ ನಡೆಸಬಹುದು ಎಂದು ನ್ಯಾಯಪೀಠ ತಿಳಿಸಿತು.

►9

Academy

ಅಡಿ ಪ್ರಕರಣಗಳನ್ನು ದಾಖಲಿಸಲಾಗಿತ್ತು. ಪ್ರಕರಣದ ವಿಚಾರಣೆ ಹಲವು ವರ್ಷ ವಿಳಂಬವಾಗಿತ್ತು. ಬಂಧಿತರ ಪೈಕಿ ವರವರರಾವ್ ಅವರಿಗೆ ಮಾತ್ರ ಎರಡೂವರೆ ವರ್ಷಗಳ ನಂತರ ವೈದ್ಯಕೀಯ ಕಾರಣದಿಂದ ಜಾಮೀನು ಲಭ್ಯವಾಗಿತ್ತು.

ಮಹತ್ವದ ಆದೇಶ ನೀಡಿತು. ಪ್ರಕರಣದ ವಿಚಾರಣೆ ನಿಗದಿತ ಅವಧಿಯಲ್ಲಿ ಮುಗಿಯುವುದಿಲ್ಲ ಎನ್ನುವಂತಿದ್ದರೆ ಅಥವಾ ಆರೋಪಿ ಆದಾಗಲೇ ಗಣನೀಯ ಅವಧಿಯ ಜೈಲುವಾಸ ಅನುಭವಿಸಿದ್ದರೆ, ಅವರಿಗೆ ಜಾಮೀನು

ಸಾಬೀತಾಗದಿರುವುದು-ಸೆಕ್ಷನ್ 43-ಡಿ 5) ಎಂದು ಗುಲ್‌ಫಿಶಾ ಫಾತಿಮಾ ಮತ್ತು ಗುರ್‌ವಿಂದರ್ ಸಿಂಗ್ ಪ್ರಕರಣಗಳಲ್ಲಿ ಸುಪ್ರೀಂ ಕೋರ್ಟ್‌ನ ನ್ಯಾಯಪೀಠ ಹೇಳಿತ್ತು.

**ಮತ್ತೆ ಭಿನ್ನ ವ್ಯಾಖ್ಯಾನ:** ಈಗ ಮತ್ತೆ ಇದೇ ವಿಚಾರಕ್ಕೆ

ಕಾಯ್ದೆಯ ಜಾಮೀನು ನಿಯಮಗಳು ಮತ್ತು ಸಂವಿಧಾನದ ಮೂಲಭೂತ ಹಕ್ಕುಗಳ ಬಗೆಗಿನ ಚರ್ಚೆ ಏರ್ಪಟ್ಟಿದ್ದು, ದೇಶದ ಅತ್ಯುನ್ನತ ನ್ಯಾಯಾಲಯದಲ್ಲಿಯೇ ಭಿನ್ನ ವ್ಯಾಖ್ಯಾನಗಳು ಕೇಳಿಬಂದಿವೆ.

## ಪತ್ರಕರ್ತರ ವಿರುದ್ಧವೂ ಪ್ರಯೋಗ

ತನ್ನನ್ನು ಕಟುವಾಗಿ ಟೀಕಿಸುತ್ತಿರುವವರನ್ನು ಹತ್ತಿಕ್ಕಲು ಕೇಂದ್ರ ಸರ್ಕಾರ ಈ ಕಾಯ್ದೆಯನ್ನು ಗುರಾಣಿಯನ್ನಾಗಿ ಬಳಸಿಕೊಳ್ಳುತ್ತಿದೆ ಎಂಬುದು ಸರ್ಕಾರದ ವಿರುದ್ಧ ಕೇಳಿಬರುತ್ತಿರುವ ಗಂಭೀರ ಆರೋಪ. ಬಿಜೆಪಿ ಆಡಳಿತದಲ್ಲಿರುವ ರಾಜ್ಯಗಳು ಕೂಡ ಈ ಕಾನೂನನ್ನು ದುರ್ಬಳಕೆ ಮಾಡಿಕೊಳ್ಳುತ್ತಿವೆ ಎಂಬ ಆರೋಪವೂ ಇದೆ.

ಹೋರಾಟಗಾರರು, ಮಾನವ ಹಕ್ಕುಗಳ ಕಾರ್ಯಕರ್ತರನ್ನಲ್ಲದೆ, ಪತ್ರಕರ್ತರನ್ನೂ ಬಂಧಿಸಲಾಗಿದೆ. ಕೇರಳದ ಪತ್ರಕರ್ತ ಸಿದ್ದೀಕ್ ಕಪ್ಪನ್ ಅವರು 2020ರಲ್ಲಿ ಉತ್ತರ ಪ್ರದೇಶದ ಹಾಥರಸ್ ಸಾಮೂಹಿಕ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ವರದಿಗೆಂದು ಹೋಗುತ್ತಿದ್ದಾಗ ಪೊಲೀಸರು ಅವರನ್ನು ಬಂಧಿಸಿದ್ದರು. 28 ತಿಂಗಳ ಜೈಲುವಾಸದ ಬಳಿಕ 2023ರ ಫೆಬ್ರುವರಿ 2ರಂದು ಅವರು ಬಿಡುಗಡೆಯಾದರು. ಕಾಶ್ಮೀರದ ಪತ್ರಕರ್ತ ಇರ್ಫಾನ್ ಮೆಹರಾಜ್ ಅವರು 2023ರ ಮಾರ್ಚ್ 20ರಂದು ಬಂಧನಕ್ಕೆ ಒಳಗಾಗಿದ್ದರು. ಅವರಿನ್ನೂ ಸೆರೆವಾಸದಲ್ಲಿದ್ದಾರೆ. 2023ರಲ್ಲಿ ನ್ಯೂಸ್‌ಕ್ಲಿಕ್ ಮಾಧ್ಯಮ ಸಂಸ್ಥೆಯ ಸಂಸ್ಥಾಪಕ ಪ್ರಬೀರ್ ಪುರಕಾಯಸ್ಥ ಅವರನ್ನು ಕೂಡ ಇದೇ ಕಾನೂನಿನ ಅಡಿಯಲ್ಲಿ ಬಂಧಿಸಲಾಗಿತ್ತು. 225 ದಿನಗಳ ಜೈಲುವಾಸವನ್ನು ಅವರು ಅನುಭವಿಸಿದ್ದರು. ನ್ಯೂಸ್‌ಕ್ಲಿಕ್ ಚೀನಾದಿಂದ ಹಣಕಾಸು ನೆರವು ಪಡೆದಿದೆ ಎಂದು ಆರೋಪಿಸಲಾಗಿತ್ತು.

## ಯುಎಪಿಎ: ಬಂಧಿತರು ಮತ್ತು ಶಿಕ್ಷೆಗೆ ಒಳಗಾದವರು





## ಶಿಕ್ಷೆಗೆ ಒಳಗಾದವರು ಕಡಿಮೆ

ಯುಎಪಿಎ ಅಡಿಯಲ್ಲಿ ಬಂಧಿತರಾಗುತ್ತಿರುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದ್ದರೂ, ಶಿಕ್ಷೆಗೆ ಒಳಗಾಗುತ್ತಿರುವವರ ಸಂಖ್ಯೆ ತುಂಬಾ ಕಡಿಮೆ. ಕೇಂದ್ರ ಗೃಹ ಸಚಿವಾಲಯವು ಕಳೆದ ವರ್ಷದ ಡಿಸೆಂಬರ್‌ನಲ್ಲಿ ಸಂಸತ್ತಿನಲ್ಲಿ ನೀಡಿರುವ ಅಂಕಿ ಅಂಶಗಳು ಇದನ್ನು ಹೇಳುತ್ತಿವೆ. 2019ರಿಂದ 2023ರ ನಡುವೆ ಯುಎಪಿಎ ಅಡಿಯಲ್ಲಿ ಒಟ್ಟು 10,440 ಮಂದಿಯನ್ನು ಬಂಧಿಸಲಾಗಿತ್ತು. ಈ ಪೈಕಿ 335 ಜನರು ಅಪರಾಧ ಎಸಗಿರುವುದು ಸಾಬೀತಾಗಿ ಶಿಕ್ಷೆಗೆ ಗುರಿಯಾಗಿದ್ದಾರೆ. ಶೇಕಡವಾರು ಲೆಕ್ಕಾಚಾರದಲ್ಲಿ ಶಿಕ್ಷೆಗೆ ಒಳಗಾಗಿರುವ ಪ್ರಮಾಣ ಶೇ 3.2ರಷ್ಟು ಮಾತ್ರ.

ಈ ಐದು ವರ್ಷಗಳಲ್ಲಿ ಜಮ್ಮು ಮತ್ತು ಕಾಶ್ಮೀರ ಹಾಗೂ ಉತ್ತರ ಪ್ರದೇಶದಲ್ಲಿ ಅತಿ ಹೆಚ್ಚು ಮಂದಿಯನ್ನು ಈ ಕಾನೂನಿನ ಅಡಿಯಲ್ಲಿ ಬಂಧಿಸಲಾಗಿದೆ. ಜಮ್ಮು ಮತ್ತು ಕಾಶ್ಮೀರದಲ್ಲಿ 3,662 ಜನರನ್ನು ಬಂಧಿಸಲಾಗಿದ್ದರೆ, ಉತ್ತರ ಪ್ರದೇಶದಲ್ಲಿ ಈ ಸಂಖ್ಯೆ 2,805ರಷ್ಟಿದೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಶಿಕ್ಷೆಗೆ ಒಳಗಾದವರು 23 ಮಂದಿ ಮಾತ್ರ. ಉತ್ತರ ಪ್ರದೇಶದಲ್ಲಿ 222 ಮಂದಿಯ ಮೇಲಿನ ಆರೋಪಗಳು ಸಾಬೀತಾಗಿ ಶಿಕ್ಷೆಗೆ ಗುರಿಯಾಗಿದ್ದಾರೆ. ಶೇಕಡವಾರು ಲೆಕ್ಕ ಹಾಕಿದರೆ ಜಮ್ಮು ಮತ್ತು ಕಾಶ್ಮೀರದಲ್ಲಿ ಶಿಕ್ಷೆಗೆ ಒಳಗಾಗಿರುವವರ ಪ್ರಮಾಣ ಶೇ 1 ಕೂಡ (0.68 %) ದಾಟುವುದಿಲ್ಲ.

## ಕರ್ನಾಟಕದಲ್ಲಿ ಬಂಧಿತರು

ಐದು ವರ್ಷಗಳಲ್ಲಿ ಕರ್ನಾಟಕದಲ್ಲಿ ಈ ಕಾಯ್ದೆ ಅಡಿಯಲ್ಲಿ 24 ಮಂದಿಯನ್ನು ಬಂಧಿಸಲಾಗಿದೆ. 2023ರಲ್ಲಿ ಮಾತ್ರ ಮೂವರಿಗೆ ಶಿಕ್ಷೆಯಾಗಿದೆ.




ಆಧಾರ: ಪಿಟಿಐ, ಸಂಸತ್ತಿನಲ್ಲಿ ನೀಡಿದ ಉತ್ತರಗಳು, ಸುಪ್ರೀಂ ಕೋರ್ಟ್ ಅಬ್ಸರ್ವರ್, ಆಕ್ಸ್‌ಫರ್ಡ್ ಹ್ಯೂಮನ್ ರೈಟ್ಸ್ ಹಬ್, ಮಾಧ್ಯಮ ವರದಿಗಳು

ಅಡಿ ಪ್ರಕರಣಗಳನ್ನು ದಾಖಲಿಸಲಾಗಿತ್ತು. ಪ್ರಕರಣದ ವಿಚಾರಣೆ ಹಲವು ವರ್ಷ ವಿಳಂಬವಾಗಿತ್ತು. ಬಂಧಿತರ ಪೈಕಿ ವರವರರಾವ್ ಅವರಿಗೆ ಮಾತ್ರ ಎರಡೂವರೆ ವರ್ಷಗಳ ನಂತರ ವೈದ್ಯಕೀಯ ಕಾರಣದಿಂದ ಜಾಮೀನು ಲಭ್ಯವಾಗಿತ್ತು.

ಮಹತ್ವದ ಆದೇಶ ನೀಡಿತು. ಪ್ರಕರಣದ ವಿಚಾರಣೆ ನಿಗದಿತ ಅವಧಿಯಲ್ಲಿ ಮುಗಿಯುವುದಿಲ್ಲ ಎನ್ನುವಂತಿದ್ದರೆ ಅಥವಾ ಆರೋಪಿ ಆದಾಗಲೇ ಗಣನೀಯ ಅವಧಿಯ ಜೈಲುವಾಸ ಅನುಭವಿಸಿದ್ದರೆ, ಅವರಿಗೆ ಜಾಮೀನು

ಸಾಬೀತಾಗದಿರುವುದು-ಸೆಕ್ಷನ್ 43-ಡಿ 5) ಎಂದು ಗುಲ್‌ಫಿಶಾ ಫಾತಿಮಾ ಮತ್ತು ಗುರ್‌ವಿಂದರ್ ಸಿಂಗ್ ಪ್ರಕರಣಗಳಲ್ಲಿ ಸುಪ್ರೀಂ ಕೋರ್ಟ್‌ನ ನ್ಯಾಯಪೀಠ ಹೇಳಿತ್ತು.

**ಮತ್ತೆ ಭಿನ್ನ ವ್ಯಾಖ್ಯಾನ:** ಈಗ ಮತ್ತೆ ಇದೇ ವಿಚಾರಕ್ಕೆ

ಕಾಯ್ದೆಯ ಜಾಮೀನು ನಿಯಮಗಳು ಮತ್ತು ಸಂವಿಧಾನದ ಮೂಲಭೂತ ಹಕ್ಕುಗಳ ಬಗೆಗಿನ ಚರ್ಚೆ ಏರ್ಪಟ್ಟಿದ್ದು, ದೇಶದ ಅತ್ಯುನ್ನತ ನ್ಯಾಯಾಲಯದಲ್ಲಿಯೇ ಭಿನ್ನ ವ್ಯಾಖ್ಯಾನಗಳು ಕೇಳಿಬಂದಿವೆ.

## ಪತ್ರಕರ್ತರ ವಿರುದ್ಧವೂ ಪ್ರಯೋಗ

ತನ್ನನ್ನು ಕಟುವಾಗಿ ಟೀಕಿಸುತ್ತಿರುವವರನ್ನು ಹತ್ತಿಕ್ಕಲು ಕೇಂದ್ರ ಸರ್ಕಾರ ಈ ಕಾಯ್ದೆಯನ್ನು ಗುರಾಣಿಯನ್ನಾಗಿ ಬಳಸಿಕೊಳ್ಳುತ್ತಿದೆ ಎಂಬುದು ಸರ್ಕಾರದ ವಿರುದ್ಧ ಕೇಳಿಬರುತ್ತಿರುವ ಗಂಭೀರ ಆರೋಪ. ಬಿಜೆಪಿ ಆಡಳಿತದಲ್ಲಿರುವ ರಾಜ್ಯಗಳು ಕೂಡ ಈ ಕಾನೂನನ್ನು ದುರ್ಬಳಕೆ ಮಾಡಿಕೊಳ್ಳುತ್ತಿವೆ ಎಂಬ ಆರೋಪವೂ ಇದೆ.

ಹೋರಾಟಗಾರರು, ಮಾನವ ಹಕ್ಕುಗಳ ಕಾರ್ಯಕರ್ತರನ್ನಲ್ಲದೆ, ಪತ್ರಕರ್ತರನ್ನೂ ಬಂಧಿಸಲಾಗಿದೆ. ಕೇರಳದ ಪತ್ರಕರ್ತ ಸಿದ್ದೀಕ್ ಕಪ್ಪನ್ ಅವರು 2020ರಲ್ಲಿ ಉತ್ತರ ಪ್ರದೇಶದ ಹಾಥರಸ್ ಸಾಮೂಹಿಕ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ವರದಿಗೆಂದು ಹೋಗುತ್ತಿದ್ದಾಗ ಪೊಲೀಸರು ಅವರನ್ನು ಬಂಧಿಸಿದ್ದರು. 28 ತಿಂಗಳ ಜೈಲುವಾಸದ ಬಳಿಕ 2023ರ ಫೆಬ್ರುವರಿ 2ರಂದು ಅವರು ಬಿಡುಗಡೆಯಾದರು. ಕಾಶ್ಮೀರದ ಪತ್ರಕರ್ತ ಇರ್ಫಾನ್ ಮೆಹರಾಜ್ ಅವರು 2023ರ ಮಾರ್ಚ್ 20ರಂದು ಬಂಧನಕ್ಕೆ ಒಳಗಾಗಿದ್ದರು. ಅವರಿನ್ನೂ ಸೆರೆವಾಸದಲ್ಲಿದ್ದಾರೆ. 2023ರಲ್ಲಿ ನ್ಯೂಸ್‌ಕ್ಲಿಕ್ ಮಾಧ್ಯಮ ಸಂಸ್ಥೆಯ ಸಂಸ್ಥಾಪಕ ಪ್ರಬೀರ್ ಪುರಕಾಯಸ್ಥ ಅವರನ್ನು ಕೂಡ ಇದೇ ಕಾನೂನಿನ ಅಡಿಯಲ್ಲಿ ಬಂಧಿಸಲಾಗಿತ್ತು. 225 ದಿನಗಳ ಜೈಲುವಾಸವನ್ನು ಅವರು ಅನುಭವಿಸಿದ್ದರು. ನ್ಯೂಸ್‌ಕ್ಲಿಕ್ ಚೀನಾದಿಂದ ಹಣಕಾಸು ನೆರವು ಪಡೆದಿದೆ ಎಂದು ಆರೋಪಿಸಲಾಗಿತ್ತು.

## ಯುಎಪಿಎ: ಬಂಧಿತರು ಮತ್ತು ಶಿಕ್ಷೆಗೆ ಒಳಗಾದವರು





## ಶಿಕ್ಷೆಗೆ ಒಳಗಾದವರು ಕಡಿಮೆ

ಯುಎಪಿಎ ಅಡಿಯಲ್ಲಿ ಬಂಧಿತರಾಗುತ್ತಿರುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದ್ದರೂ, ಶಿಕ್ಷೆಗೆ ಒಳಗಾಗುತ್ತಿರುವವರ ಸಂಖ್ಯೆ ತುಂಬಾ ಕಡಿಮೆ. ಕೇಂದ್ರ ಗೃಹ ಸಚಿವಾಲಯವು ಕಳೆದ ವರ್ಷದ ಡಿಸೆಂಬರ್‌ನಲ್ಲಿ ಸಂಸತ್ತಿನಲ್ಲಿ ನೀಡಿರುವ ಅಂಕಿ ಅಂಶಗಳು ಇದನ್ನು ಹೇಳುತ್ತಿವೆ. 2019ರಿಂದ 2023ರ ನಡುವೆ ಯುಎಪಿಎ ಅಡಿಯಲ್ಲಿ ಒಟ್ಟು 10,440 ಮಂದಿಯನ್ನು ಬಂಧಿಸಲಾಗಿತ್ತು. ಈ ಪೈಕಿ 335 ಜನರು ಅಪರಾಧ ಎಸಗಿರುವುದು ಸಾಬೀತಾಗಿ ಶಿಕ್ಷೆಗೆ ಗುರಿಯಾಗಿದ್ದಾರೆ. ಶೇಕಡವಾರು ಲೆಕ್ಕಾಚಾರದಲ್ಲಿ ಶಿಕ್ಷೆಗೆ ಒಳಗಾಗಿರುವ ಪ್ರಮಾಣ ಶೇ 3.2ರಷ್ಟು ಮಾತ್ರ.

ಈ ಐದು ವರ್ಷಗಳಲ್ಲಿ ಜಮ್ಮು ಮತ್ತು ಕಾಶ್ಮೀರ ಹಾಗೂ ಉತ್ತರ ಪ್ರದೇಶದಲ್ಲಿ ಅತಿ ಹೆಚ್ಚು ಮಂದಿಯನ್ನು ಈ ಕಾನೂನಿನ ಅಡಿಯಲ್ಲಿ ಬಂಧಿಸಲಾಗಿದೆ. ಜಮ್ಮು ಮತ್ತು ಕಾಶ್ಮೀರದಲ್ಲಿ 3,662 ಜನರನ್ನು ಬಂಧಿಸಲಾಗಿದ್ದರೆ, ಉತ್ತರ ಪ್ರದೇಶದಲ್ಲಿ ಈ ಸಂಖ್ಯೆ 2,805ರಷ್ಟಿದೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಶಿಕ್ಷೆಗೆ ಒಳಗಾದವರು 23 ಮಂದಿ ಮಾತ್ರ. ಉತ್ತರ ಪ್ರದೇಶದಲ್ಲಿ 222 ಮಂದಿಯ ಮೇಲಿನ ಆರೋಪಗಳು ಸಾಬೀತಾಗಿ ಶಿಕ್ಷೆಗೆ ಗುರಿಯಾಗಿದ್ದಾರೆ. ಶೇಕಡವಾರು ಲೆಕ್ಕ ಹಾಕಿದರೆ ಜಮ್ಮು ಮತ್ತು ಕಾಶ್ಮೀರದಲ್ಲಿ ಶಿಕ್ಷೆಗೆ ಒಳಗಾಗಿರುವವರ ಪ್ರಮಾಣ ಶೇ 1 ಕೂಡ (0.68 %) ದಾಟುವುದಿಲ್ಲ.

## ಕರ್ನಾಟಕದಲ್ಲಿ ಬಂಧಿತರು

ಐದು ವರ್ಷಗಳಲ್ಲಿ ಕರ್ನಾಟಕದಲ್ಲಿ ಈ ಕಾಯ್ದೆ ಅಡಿಯಲ್ಲಿ 24 ಮಂದಿಯನ್ನು ಬಂಧಿಸಲಾಗಿದೆ. 2023ರಲ್ಲಿ ಮಾತ್ರ ಮೂವರಿಗೆ ಶಿಕ್ಷೆಯಾಗಿದೆ.




ಆಧಾರ: ಪಿಟಿಐ, ಸಂಸತ್ತಿನಲ್ಲಿ ನೀಡಿದ ಉತ್ತರಗಳು, ಸುಪ್ರೀಂ ಕೋರ್ಟ್ ಅಬ್ಸರ್ವರ್, ಆಕ್ಸ್‌ಫರ್ಡ್ ಹ್ಯೂಮನ್ ರೈಟ್ಸ್ ಹಬ್, ಮಾಧ್ಯಮ ವರದಿಗಳು

### ದ್ವಿಪಕ್ಷೀಯ ಬಾಂಧವ್ಯ ವೃದ್ಧಿ ಕುರಿತಂತೆ ಮಾತುಕತೆ

# ‘ನಾರ್ಡಿಕ್’ ಪ್ರಧಾನಿಗಳ ಜೊತೆ ಮೋದಿ ಚರ್ಚೆ

ಓಸ್ಲೊ(ನಾರ್ವೆ)(ಪಿಟಿಐ): ಯುರೋಪ್ ರಾಷ್ಟ್ರಗಳ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ ಅವರು, ಐಸ್‌ಲ್ಯಾಂಡ್, ಫಿನ್ಲೆಂಡ್ ಹಾಗೂ ಡೆನ್ಮಾರ್ಕ್ ದೇಶಗಳ ಪ್ರಧಾನಿಯವರೊಂದಿಗೆ ಪ್ರತ್ಯೇಕ ಸಭೆ ನಡೆಸಿ, ದ್ವಿಪಕ್ಷೀಯ ಸಂಬಂಧ ವೃದ್ಧಿ ಕುರಿತು ಚರ್ಚಿಸಿದರು.

ಭಾರತ-ನಾರ್ಡಿಕ್ 3ನೇ ಶೃಂಗಸಭೆ ಸಂದರ್ಭದಲ್ಲಿ ಈ ಸಭೆಗಳನ್ನು ನಡೆಸಿದ ಮೋದಿ, ಶುದ್ಧ ಇಂಧನ, ವ್ಯಾಪಾರ, ಸುಸ್ಥಿರತೆ ಹಾಗೂ ಡಿಜಿಟಲೀಕರಣ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಹಕಾರ ಕುರಿತಂತೆ ಚರ್ಚೆ ನಡೆಸಿದರು.

‘ಐಸ್‌ಲ್ಯಾಂಡ್ ಪ್ರಧಾನಿ ಕ್ರಿಸ್ಟ್ರನ್ ಫ್ರೊಸ್ತದೊಟ್ಟಿರ್, ಫಿನ್ಲೆಂಡ್‌ನ ಪೆಟೇರಿ ಒರ್ಪೊ ಹಾಗೂ ಡೆನ್ಮಾರ್ಕ್‌ನ ಹಂಗಾಮಿ ಪ್ರಧಾನಿ ಮೆಟ್ಟೆ ಫ್ರೆಡರಿಕ್‌ಸನ್ ಅವರೊಂದಿಗೆ ನಡೆಸಿದ ಸಭೆಯಲ್ಲಿ, ಭಾರತ ಹಾಗೂ ನಾರ್ಡಿಕ್ ದೇಶಗಳ ನಡುವಿನ ಸಂಬಂಧವನ್ನು ಮತ್ತಷ್ಟು ಬಲಪಡಿಸುವ ಕುರಿತು ವ್ಯಾಪಕ ಚರ್ಚೆ ನಡೆಸಲಾಯಿತು’ ಎಂದು ಸಾಮಾಜಿಕ ಮಾಧ್ಯಮದಲ್ಲಿ ಮೋದಿ ಪೋಸ್ಟ್ ಮಾಡಿದ್ದಾರೆ.

## ಪತ್ರಕರ್ತೆ ಪ್ರಶ್ನೆಗೆ ಉತ್ತರಿಸದ ಮೋದಿ

**ನವದೆಹಲಿ:** ನಾರ್ವೆ ಪ್ರವಾಸದ ವೇಳೆ, ಕೆಲ ಪ್ರಶ್ನೆಗಳಿಗೆ ಉತ್ತರಿಸುವಂತೆ ಪತ್ರಕರ್ತೆಯೊಬ್ಬರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮನವಿ ಮಾಡಿದ್ದಾರೆ. ಆದರೆ, ಮೋದಿ ಅವರು ಯಾವುದೇ ಪ್ರಶ್ನೆಗೆ ಉತ್ತರಿಸದೇ ಸಭಾಂಗಣದಿಂದ ನಿರ್ಗಮಿಸಿದ್ದಾರೆ. ಅವರ ಈ ನಡೆ ಮತ್ತೊಮ್ಮೆ ಚರ್ಚೆಗೆ ಗ್ರಾಸವಾಗಿದೆ.

ರಾಜಧಾನಿ ಓಸ್ಲೊದಲ್ಲಿ ನಾರ್ವೆ ಪ್ರಧಾನಿ ಜೋನಸ್ ಗರ್ ಸ್ಟೋರ್ ಅವರೊಂದಿಗೆ ಮೋದಿ ಮಾತುಕತೆ ನಡೆಸಿದ ಬಳಿಕ, ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ್ದಾರೆ. ನಂತರ, ವೇದಿಕೆಯಿಂದ ಇಳಿಯುವ ವೇಳೆ, ಮೋದಿ ಅವರನ್ನು ಉದ್ದೇಶಿಸಿ ಪತ್ರಕರ್ತೆ ಹೆಲ್ ಲಿಂಗ್ ಅವರು, ‘ಪ್ರಧಾನಿ ಮೋದಿಯವರೇ, ವಿಶ್ವದ ಅತ್ಯಂತ ಮುಕ್ತ ಪತ್ರಿಕಾರಂಗ ನಮ್ಮದು. ನಾವು ಕೇಳುವ ಕೆಲ ಪ್ರಶ್ನೆಗಳಿಗೆ ಏಕೆ ನೀವು ಉತ್ತರಿಸುವುದಿಲ್ಲ’ ಎಂದು ಹೇಳುತ್ತಿರುವುದು ವಿಡಿಯೊದಲ್ಲಿದೆ.

ಇದಾದ ಬಳಿಕ ಅವರು, ‘ಭಾರತದ ಪ್ರಧಾನಿ ನರೇಂದ್ರ ಮೋದಿಯವರು ನನ್ನ ಪ್ರಶ್ನೆಗೆ ಉತ್ತರಿಸಲಿಲ್ಲ. ಅವರಿಂದ ನಾನು ಇಂತಹ ನಡೆ ನಿರೀಕ್ಷಿಸಿರಲಿಲ್ಲ. ನಮ್ಮ ಕೆಲಸವೇ ಅಧಿಕಾರಸ್ಥರನ್ನು ಪ್ರಶ್ನೆ ಮಾಡುವುದು’ ಎಂದು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

ತಮ್ಮ ಪ್ರಶ್ನೆಗಳಿಗೆ ಉತ್ತರಿಸುವಂತೆ ಅವರು ಮೋದಿಯವರಿಗೆ ಮನವಿ ಮಾಡುತ್ತಿದ್ದ ದೃಶ್ಯಗಳಿರುವ ವಿಡಿಯೊವನ್ನು ಕೂಡ ಲಿಂಗ್ ಹಂಚಿಕೊಂಡಿದ್ದಾರೆ.

‘ವಿಶ್ವ ಪತ್ರಿಕಾ ಸ್ವಾತಂತ್ರ್ಯ ಸೂಚ್ಯಂಕಕ್ಕೆ ಸಂಬಂಧಿಸಿ ನಾರ್ವೆ ಮೊದಲ ಸ್ಥಾನದಲ್ಲಿದ್ದರೆ, ಭಾರತ 157ನೇ ಸ್ಥಾನದಲ್ಲಿದೆ. ಈ ವಿಚಾರದಲ್ಲಿ ಭಾರತವು ಪ್ಯಾಲೆಸ್ಟೀನ್, ಯುಎಇ ಹಾಗೂ ಕ್ಯೂಬಾ ಜೊತೆ ಪೈಪೋಟಿ ಮಾಡುತ್ತಿದೆ’ ಎಂದೂ ಅವರು ‘ಎಕ್ಸ್’ನಲ್ಲಿ ಬರೆದುಕೊಂಡಿದ್ದಾರೆ.

**ಆಹ್ವಾನ:** ಈ ಬೆಳವಣಿಗೆ ಬೆನ್ನಲ್ಲೇ, ಓಸ್ಲೊದಲ್ಲಿರುವ ಭಾರತದ ರಾಯಭಾರ ಕಚೇರಿಯು, ವಿದೇಶಾಂಗ ಸಚಿವಾಲಯ ಆಯೋಜಿಸಿದ್ದ ಸುದ್ದಿಗೋಷ್ಠಿಗೆ ಲಿಂಗ್ ಅವರನ್ನು ಆಹ್ವಾನಿಸಿತ್ತು.

‘ವಿದೇಶದ ನಾಯಕರೊಂದಿಗೆ ಸಭೆ ನಡೆಸುವುದಕ್ಕೂ ಮೊದಲು ಅಥವಾ ಸಭೆ ನಂತರ ಮಾಧ್ಯಮಗಳನ್ನು ಉದ್ದೇಶಿಸಿ ಮಾತನಾಡುವ ವೇಳೆ ಪ್ರಧಾನಿ ಸಾಮಾನ್ಯವಾಗಿ ಪತ್ರಕರ್ತರ ಪ್ರಶ್ನೆಗಳಿಗೆ ಉತ್ತರಿಸುವುದಿಲ್ಲ’ ಎಂದು ಸಚಿವಾಲಯ ಹೇಳಿದೆ.

# ದೇವಸ್ಥಾನಗಳ ಆಡಳಿತ ನಿಯಂತ್ರಿಸುವ ಕಾಯ್ದೆ: ಸುಪ್ರೀಂ ಕೋರ್ಟ್ ಪರಿಶೀಲನೆ



ನವದೆಹಲಿ: ತಮಿಳುನಾಡು, ಆಂಧ್ರ ಪ್ರದೇಶ, ತೆಲಂಗಾಣ ಮತ್ತು ಪುದುಚೆರಿಯಲ್ಲಿ ಹಿಂದೂ ದೇವಸ್ಥಾನಗಳ ಆಡಳಿತವನ್ನು ನಿಯಂತ್ರಿಸುವ ಕಾನೂನುಗಳ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿ 2012ರಲ್ಲಿ ಸಲ್ಲಿಸಲಾಗಿದ್ದ ಅರ್ಜಿಗಳನ್ನು ಸುಪ್ರೀಂ ಕೋರ್ಟ್ ಪರಿಶೀಲನೆ ನಡೆಸಲಿದೆ.

ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಮತ್ತು ಸತೀಶ್ ಚಂದ್ರ ಶರ್ಮಾ ಅವರ ಪೀಠವು ಸೋಮವಾರ ಮರು ಪರಿಶೀಲನಾ ಅರ್ಜಿಗಳನ್ನು ಅನುಮತಿಸುವ ಮೂಲಕ 2025ರ ಏಪ್ರಿಲ್‌ನಲ್ಲಿ ನೀಡಿದ್ದ ಆದೇಶವನ್ನು ಹಿಂಪಡೆದಿದೆ. ಹಿಂದಿನ ಆದೇಶದಲ್ಲಿ, ಅರ್ಜಿದಾರರಿಗೆ ರಿಟ್ ಅರ್ಜಿಗಳನ್ನು ಸಲ್ಲಿಸುವ ಬದಲು ಆಯಾ ಹೈಕೋರ್ಟ್‌ಗಳನ್ನು ಸಂಪರ್ಕಿಸಲು ಸೂಚಿಸಲಾಗಿತ್ತು.

ತಮಿಳುನಾಡು ಹಿಂದೂ ಧಾರ್ಮಿಕ ಮತ್ತು ದತ್ತಿ ಕಾಯ್ದೆ 1959, ಆಂಧ್ರ ಪ್ರದೇಶ ಧಾರ್ಮಿಕ ಸಂಸ್ಥೆಗಳು ಮತ್ತು ದತ್ತಿ ಕಾಯ್ದೆ 1987, ಪುದುಚೆರಿ ಹಿಂದೂ ಧಾರ್ಮಿಕ ಸಂಸ್ಥೆಗಳ ಕಾಯ್ದೆ 1972 ಮತ್ತು 1987ರ ತೆಲಂಗಾಣ ಧಾರ್ಮಿಕ ಸಂಸ್ಥೆಗಳು ಮತ್ತು ದತ್ತಿ ಕಾಯ್ದೆಯಲ್ಲಿನ ನಿಬಂಧನೆಗಳನ್ನು 2012ರಲ್ಲಿ ಸಲ್ಲಿಸಲಾಗಿದ್ದ ಅರ್ಜಿಯಲ್ಲಿ ಪ್ರಶ್ನಿಸಲಾಗಿತ್ತು.

ಈ ಮೂರೂ ಕಾಯ್ದೆಯಲ್ಲಿನ ನಿಬಂಧನೆಗಳು ಸಂವಿಧಾನದ 14 (ಸಮಾನತೆಯ ಹಕ್ಕು), 19 (ವ್ಯಕ್ತಿ ಸ್ವಾತಂತ್ರ್ಯ), 25, 26 ಮತ್ತು 31ಎ ವಿಧಿಗಳನ್ನು ಉಲ್ಲಂಘಿಸುತ್ತವೆ ಎಂದು ಅರ್ಜಿದಾರರು ಸುಪ್ರೀಂ ಕೋರ್ಟ್ ಮೊರೆಹೋಗಿದ್ದರು.

Academy

# 'ಲಕ್ಕುಂಡಿ: ಸ್ಯಾಟಲೈಟ್ ತಂತ್ರಜ್ಞಾನ ಬಳಕೆ'

ಪ್ರಜಾವಾಣಿ ವಾರ್ತೆ



ಎಚ್.ಕೆ. ಪಾಟೀಲ

ಬೆಂಗಳೂರು: 'ಲಕ್ಕುಂಡಿಯಲ್ಲಿರುವ ನೂರೊಂದು ಬಾವಿ, ನೂರೊಂದು ದೇವಾಲಯಗಳನ್ನು ರಾಷ್ಟ್ರೀಯ ಉನ್ನತ ಅಧ್ಯಯನ ಸಂಸ್ಥೆ (ಎನ್‌ಐಎಎಸ್) ಸಹಕಾರದಲ್ಲಿ ಸ್ಯಾಟಲೈಟ್ ಇಮೇಜಿಂಗ್ ಟೆಕ್ನಾಲಜಿ ಬಳಸಿ ಶೀಘ್ರ ಪತ್ತೆಹಚ್ಚಿ ಅನಾವರಣಗೊಳಿಸಲಾಗುವುದು' ಎಂದು ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ ತಿಳಿಸಿದರು.

ಎನ್‌ಐಎಎಸ್ ವಿಜ್ಞಾನಿಗಳ ಜೊತೆ ಬುಧವಾರ ನಡೆದ ಸಭೆಯಲ್ಲಿ ಮಾತನಾಡಿದ ಸಚಿವರು, 'ಲಕ್ಕುಂಡಿಯಲ್ಲಿ 32 ದೇವಾಲಯಗಳು, 28 ಬಾವಿಗಳು ಹಾಗೂ ಏಳು ಇತರೆ ಸ್ಮಾರಕಗಳನ್ನು ಒಳಗೊಂಡಂತೆ ಒಟ್ಟು 70ಕ್ಕೂ ಹೆಚ್ಚು ಸ್ಮಾರಕಗಳನ್ನು ಈಗಾಗಲೇ ಗುರುತಿಸಲಾಗಿದೆ. ಮುಂಬರುವ ಡಿ.31ರ ಒಳಗೆ 101 ಬಾವಿ ಹಾಗೂ 101 ದೇವಾಲಯಗಳನ್ನು ಅನಾವರಣಗೊಳಿಸಲು ಎಲ್ಲ ಪ್ರಯತ್ನಗಳನ್ನು ಮಾಡಲಾಗುವುದು' ಎಂದರು.

'ಲಕ್ಕುಂಡಿಯನ್ನು ವಿಶ್ವ ಪಾರಂಪರಿಕ ತಾಣಗಳ ಪಟ್ಟಿಗೆ (ಯುನೆಸ್ಕೋ) ಸೇರಿಸಲು ಪ್ರಸ್ತಾವ ಸಿದ್ಧಪಡಿಸುವ ಕಾರ್ಯ ಪ್ರಗತಿಯಲ್ಲಿದೆ. ಈ ಉದ್ದೇಶದಿಂದ ಪ್ರಾಚ್ಯಾವಶೇಷಗಳ ಅನ್ವೇಷಣೆ ಭಾಗ-1ನ್ನು ನಡೆಸಿ 1,500ಕ್ಕೂ ಹೆಚ್ಚು ಪ್ರಾಚ್ಯಾವಶೇಷಗಳನ್ನು ಅನ್ವೇಷಿಸಲಾಗಿದೆ. ಮೇ 2ರಿಂದ ಪ್ರಾಚ್ಯಾವಶೇಷಗಳ ಅನ್ವೇಷಣೆ ಭಾಗ- 2 ನಡೆಸುತ್ತಿದ್ದು, 2ನೇ ಹಂತದಲ್ಲಿ 1,800ಕ್ಕೂ ಹೆಚ್ಚು ಪ್ರಾಚ್ಯಾವಶೇಷಗಳು ದೊರೆತಿವೆ. ಎರಡು ಹಂತದ ಪ್ರಾಚ್ಯಾವಶೇಷಗಳನ್ನು ಸೇರಿಸಿ ಜೂನ್ 30ರ ಒಳಗೆ ದಾಖಲೆಯ ರೀತಿಯ 5 ಸಾವಿರಕ್ಕೂ ಹೆಚ್ಚು ಪ್ರಾಚ್ಯಾವಶೇಷಗಳನ್ನು ಅನ್ವೇಷಿಸಿ ಅವುಗಳನ್ನು ಬಯಲು ವಸ್ತುಸಂಗ್ರಹಾಲಯದಲ್ಲಿ ಪ್ರದರ್ಶಿಸಲು ಕೂಡಾ ಕ್ರಮ ವಹಿಸಲಾಗಿದೆ' ಎಂದರು.

ಸಭೆಯಲ್ಲಿ ಪಾಲ್ಗೊಂಡಿದ್ದ ಇಸ್ರೊ ಮಾಜಿ ಅಧ್ಯಕ್ಷ ಕಿರಣ್ ಕುಮಾರ್ ಮಾತನಾಡಿ, 'ಲಕ್ಕುಂಡಿ ವಿಶ್ವ ಪಾರಂಪರಿಕ ತಾಣಗಳ ಪಟ್ಟಿಗೆ ಸೇರ್ಪಡೆ ಆಗಬೇಕಿದ್ದು, ಈ ಪ್ರಯತ್ನಕ್ಕೆ ಕೈಜೋಡಿಸಲಾಗುವುದು' ಎಂದರು

2023ರಿಂದ ಇಲ್ಲಿಯವರೆಗೆ ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಕಾರ್ಯ ಚಟುವಟಿಕೆಯ ಕುರಿತು ಪ್ರಾಧಿಕಾರದ ಆಯುಕ್ತ ಶರಣು ಗೋಗೇರಿ ಪ್ರಾತ್ಯಕ್ಷಿಕೆ ಪ್ರಸ್ತುತಪಡಿಸಿದರು.

## ಹಜಾರರಾಮ ದೇವಸ್ಥಾನದ ಆವರಣದಲ್ಲಿ ಇದೇ ಮೊದಲ ಬಾರಿಗೆ ಬೆಳಕಿಗೆ

# ಹಂಪಿಯಲ್ಲಿ ಭಗ್ನ ಆಳ್ವಾರ್ ವಿಗ್ರಹಗಳು ಪತ್ತೆ

ಪ್ರಜಾವಾಣಿ ವಾರ್ತೆ

**ಮುಖ್ಯಾಂಶಗಳು**

- ಆಳ್ವಾರರು ಶ್ರೀ ವೈಷ್ಣವ ಧರ್ಮ ಪ್ರಸಾರ ಮಾಡಿದ ಸಂತರು
- ಹಂಪಿಯ ಕನಿಷ್ಠ 4 ದೇಗುಲಗಳಲ್ಲಿ ಆಳ್ವಾರ್ ಪ್ರತಿಮೆಗಳು
- ಒಂದೊಂದು ಕಡೆಯಲ್ಲೂ 12ರಿಂದ 13 ವಿಗ್ರಹಗಳು ಇದ್ದ ಶಂಕೆ

ಹೊಸಪೇಟೆ (ವಿಜಯನಗರ): ಹಂಪಿಯ ಹಜಾರರಾಮ ದೇವಸ್ಥಾನದ ಉತ್ತರ ಭಾಗದಲ್ಲಿ ನಡೆದಿರುವ ಉತ್ಖನನದ ವೇಳೆ ಎರಡು ಆಳ್ವಾರ್ ಮೂರ್ತಿಗಳ ಭಗ್ನ ಅವಶೇಷಗಳು ಪತ್ತೆಯಾಗಿವೆ.

'ಹಂಪಿಯಲ್ಲಿ ಈವರೆಗೆ ನಡೆದ ಉತ್ಖನನ ವೇಳೆ ಆಳ್ವಾರ್ ಪ್ರತಿಮೆಗಳು ಸಿಕ್ಕಿದ ನಿದರ್ಶನ ಇಲ್ಲ. ಇದೀಗ ಆಳ್ವಾರ್ ಪ್ರತಿಮೆಗಳ ಅವಶೇಷಗಳು ವಿಜಯನಗರ ಕಾಲದ ಇತಿಹಾಸದತ್ತ ಹೊಸ ಬೆಳಕು ಚೆಲ್ಲಲು ಸಹಕಾರಿ ಆಗಬಹುದು. ಸಾಮಾನ್ಯವಾಗಿ ವಿಷ್ಣು ದೇವಾಲಯಗಳಲ್ಲಿ 12 ರಿಂದ 13 ಆಳ್ವಾರ್ ಪ್ರತಿಮೆಗಳನ್ನು ಸ್ಥಾಪಿಸಲಾಗುತ್ತದೆ. ಇನ್ನಷ್ಟು ಪ್ರತಿಮೆಗಳು ಸಿಗುವ ನಿರೀಕ್ಷೆಯಿದೆ' ಎಂದು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ (ಎಎಸ್‌ಐ) ಅಧೀಕ್ಷಕ ಕೆ.ರಾಮಕೃಷ್ಣ ರೆಡ್ಡಿ 'ಪ್ರಜಾವಾಣಿ'ಗೆ ತಿಳಿಸಿದರು.

'ಕ್ರಿ.ಶ.1565ರಲ್ಲಿ ನಡೆದ ತಾಳಿಕೋಟೆಯ ರಕ್ಕಸತಂಗಡಿಯಲ್ಲಿ ನಡೆದ ಯುದ್ಧದ ಬಳಿಕ ಬಹುಮನಿ ಸುಲ್ತಾನರ ಆಕ್ರಮಣಕ್ಕೆ ತುತ್ತಾದ ಹಂಪಿಯಲ್ಲಿ ಸಾವಿರಾರು ವಿಗ್ರಹಗಳು, ದೇವರ ಮೂರ್ತಿಗಳನ್ನು ಭಗ್ನ ಮಾಡಲಾಗಿತ್ತು. ಮುಖ್ಯವಾಗಿ ವೈಷ್ಣವ ದೇವಾಲಯಗಳೇ ದಾಳಿಯ ಪ್ರಮುಖ ಗುರಿಗಳಾಗಿದ್ದವು. ಈ ಹಿಂದೆ ಅನೇಕ ಭಗ್ನ ಮೂರ್ತಿಗಳು ಸಿಕ್ಕಿದ್ದರೂ ಆಳ್ವಾರರ ಮೂರ್ತಿಗಳು ಸಿಕ್ಕಿದ್ದು ಇದೇ ಮೊದಲು' ಎಂದು ಅವರು ತಿಳಿಸಿದರು.



ಆಳ್ವಾರ್ ವಿಗ್ರಹದ ಭಗ್ನಗೊಂಡ ರುಂಡದ ಭಾಗದ

**ಯಾರು ಆಳ್ವಾರರು:** ದಕ್ಷಿಣ ಭಾರತದಲ್ಲಿ ಅದರಲ್ಲೂ ಮುಖ್ಯವಾಗಿ ತಮಿಳುನಾಡಿನಲ್ಲಿ ಶ್ರೀ ವೈಷ್ಣವ ಧರ್ಮ ಮತ್ತು ವಿಷ್ಣು ಭಕ್ತಿಯನ್ನು ಪ್ರಸಾರ ಮಾಡಿದ 12 ಮಂದಿ ಮಹಾನ್ ಸಂತರನ್ನು ಆಳ್ವಾರರು ಎಂದು ಕರೆಯಲಾಗುತ್ತದೆ. ಇವರ ಭಕ್ತಿ ಮತ್ತು ಸಾಹಿತ್ಯದ ನೆನಪಿಗಾಗಿ ಅನೇಕ ದೇವಾಲಯಗಳಲ್ಲಿ ಇವರ ಪ್ರತಿಮೆಗಳನ್ನು ಪ್ರತಿಷ್ಠಾಪಿಸಲಾಗಿದೆ.



ಉತ್ಖನನ ವೇಳೆ ದೊರೆತ ಆಳ್ವಾರರ ಭಗ್ನ ವಿಗ್ರಹಗಳು –ಪ್ರಜಾವಾಣಿ ಚಿತ್ರ

ಹಂಪಿಯ ಹಲವು ಶಾಸನಗಳಲ್ಲಿ ಆಳ್ವಾರರ ಮೂರ್ತಿಗಳಿಗೆ ನೈವೇದ್ಯ ಅರ್ಪಿಸಲು, ದೀಪ ಹಚ್ಚಲು ಮತ್ತು ವಿಶೇಷ ಉತ್ಸವಗಳನ್ನು ನಡೆಸಲು ರಾಜರು ಹಾಗೂ ಶ್ರೀಮಂತರು ನೀಡಿದ ದಾನ-ದತ್ತಿಗಳ ಉಲ್ಲೇಖವಿದೆ. ಆದರೆ ಹಜಾರರಾಮ ದೇವಸ್ಥಾನದಲ್ಲಿ ಆಳ್ವಾರರ ಸ್ವತಂತ್ರ ಮೂರ್ತಿಗಳು ಇದ್ದವೇ ಎಂಬ ಬಗ್ಗೆ ಇದುವರೆಗೆ ಮಾಹಿತಿ ಇರಲಿಲ್ಲ. ಕಂಬಗಳು ಮತ್ತು ಗೋಡೆಗಳ ಮೇಲಿರುವ ಉಬ್ಬುಶಿಲ್ಪಗಳು ಮಾತ್ರ ಆಳ್ವಾರರನ್ನು ನೆನಪಿಸುವ ಕುರುಹುಗಳಾಗಿದ್ದವು.

## ಎಲ್ಲವೂ ಹುಬ್ಬಳ್ಳಿ ಕೇಂದ್ರಿತ; ಧಾರವಾಡದಲ್ಲಿ ಸೊರಗಿದ ಆಡಳಿತ

# ಪಾಲಿಕೆ ವಿಭಜನೆ ಕೂಗು ತೀವ್ರ


• ಬಿ.ಜೆ.ಧನ್ಯಪ್ರಸಾದ್

| | | | |
|---|---|---|---|
| **20** ಕಿ.ಮೀ ಹುಬ್ಬಳ್ಳಿ- ಧಾರವಾಡ ನಗರಗಳ ನಡುವಿನ ಅಂತರ | **248** ಚದರ ಕಿ.ಮೀ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿ | **82** ಮಹಾನಗರ ಪಾಲಿಕೆಯಲ್ಲಿರುವ ವಾರ್ಡ್‌ಗಳ ಸಂಖ್ಯೆ | **13.25** ಲಕ್ಷ 2023ರ ಅಂದಾಜಿನಂತೆ ಪಾಲಿಕೆಯ ವ್ಯಾಪ್ತಿಯಲ್ಲಿರುವ ಜನಸಂಖ್ಯೆ |

'ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವಿಭಜಿಸಿ' ಎಂಬ ಬೇಡಿಕೆ ಈಗ ಮತ್ತೆ ಜೀವ ಪಡೆದಿದೆ. ಧಾರವಾಡ ಪ್ರತ್ಯೇಕ ಮಹಾನಗರ ಪಾಲಿಕೆ ಹೋರಾಟ ವೇದಿಕೆಯು ಮೇ 15ರಿಂದ ಧಾರವಾಡದ ಪಾಲಿಕೆ ಕಚೇರಿ ಎದುರು ಅನಿರ್ದಿಷ್ಟಾವಧಿ ಧರಣಿ ಆರಂಭಿಸಿದ್ದು, ಬುಧವಾರ ಆರನೇ ದಿನಕ್ಕೆ ಕಾಲಿರಿಸಿದೆ. ಹೋರಾಟದ ಮೊದಲ ಹಂತದ ಭಾಗವಾಗಿ ಪಾಲಿಕೆಯ ಮೇಯರ್, ಆಯುಕ್ತ ಮತ್ತು ಶಾಸಕ ಅರವಿಂದ ಬೆಲ್ಲದ ಅವರ ಕಚೇರಿಗಳಿಗೆ ಬೀಗ ಹಾಕಿದ ಪ್ರತಿಭಟನಕಾರರು, ಮುಂದಿನ ಹಂತದ ವಿವಿಧ ಸ್ವರೂಪಗಳ ಚಳವಳಿಗೆ ಸಿದ್ಧತೆ ನಡೆಸಿದ್ದಾರೆ. ವಿವಿಧ ಸಂಘಟನೆಗಳಿಂದ ಬೆಂಬಲವೂ ವ್ಯಕ್ತವಾಗುತ್ತಿದೆ. 'ವರ್ಷಗಳಿಂದ ಧಾರವಾಡಕ್ಕೆ ಬೇರೆ ಬೇರೆ ಸ್ವರೂಪದಲ್ಲಿ ಅನ್ಯಾಯ ಆಗುತ್ತಿದೆ. ಈಗ ಅದನ್ನು ಯಾವುದೇ ಕಾರಣಕ್ಕೂ ಸಹಿಸಲ್ಲ. ಪ್ರತ್ಯೇಕ ಧಾರವಾಡ ಪಾಲಿಕೆಯೊಂದೇ ಪರಿಹಾರ' ಎಂದು ಪ್ರತಿಭಟನಕಾರರು ಪಟ್ಟು ಹಿಡಿದಿದ್ದಾರೆ.

'ಪಾಲಿಕೆಯ ಆಡಳಿತವು ಬಹುತೇಕ ಹುಬ್ಬಳ್ಳಿ ಕೇಂದ್ರಿತವಾಗಿದೆ. ಅನುದಾನ ಹಂಚಿಕೆ ಮತ್ತು ಅಭಿವೃದ್ಧಿ ವಿಷಯದಲ್ಲಿ ಧಾರವಾಡ ನಗರವು ಉಪೇಕ್ಷೆಗೆ ಒಳಗಾಗಿದೆ. ಮಲತಾಯಿ ಧೋರಣೆಯಿಂದ ಸೊರಗಿದೆ. ವಾರದಲ್ಲಿ ಎರಡು ದಿನ (ಮಂಗಳವಾರ ಮತ್ತು ಶುಕ್ರವಾರ) ಮೇಯರ್ ಮತ್ತು ಆಯುಕ್ತರು ಧಾರವಾಡದಲ್ಲಿ ಕಾರ್ಯನಿರ್ವಹಿಸಬೇಕು ಎಂಬ ನಿಯಮವಿದೆ. ಆದರೆ, ಕಾರ್ಯದ ಒತ್ತಡದಿಂದ ಕಟ್ಟುಕಟ್ಟಳೆ ಸರಿಯಾಗಿ ಪಾಲನೆಯಾಗುತ್ತಿಲ್ಲ. ಪಾಲಿಕೆ ವಿಭಜನೆಯಾದರೆ, ಇಲ್ಲಿಗೇ ಪ್ರತ್ಯೇಕ ಮೇಯರ್, ಆಯುಕ್ತರು ಇರುತ್ತಾರೆ. ಅಭಿವೃದ್ಧಿ, ಅನುದಾನ, ಪರಿಣಾಮಕಾರಿ ಆಡಳಿತ ಎಲ್ಲದಕ್ಕೂ ಅನುಕೂಲವಾಗಲಿದೆ' ಎಂಬುದು ಹೋರಾಟಗಾರರ ಪ್ರತಿಪಾದನೆ.

ಈ ಬೆಳವಣಿಗೆಗಳು ದಿಢೀರ್ ಆರಂಭವಾಗಿದ್ದಲ್ಲ. ಧಾರವಾಡಕ್ಕೆ ಪ್ರತ್ಯೇಕ ಪಾಲಿಕೆ ರಚಿಸುವ ಸರ್ವಾನುಮತದ ನಿರ್ಣಯಕ್ಕೆ ಒಪ್ಪಿಗೆ ನೀಡಿ, ರಾಜ್ಯ ಸರ್ಕಾರವು ಅನುಮೋದನೆಗಾಗಿ ಈಗಾಗಲೇ ರಾಜ್ಯಪಾಲರ ಕಚೇರಿಗೆ ಕಳುಹಿಸಿದೆ. ಆದರೆ, 11 ತಿಂಗಳಿನಿಂದ ಪ್ರಸ್ತಾವ ಮೂಲೆಗುಂಪಾಗಿದೆ. ಕಾಂಗ್ರೆಸ್ ವಿಭಜನೆಯ ಪರವಾಗಿದ್ದರೆ, ಪಾಲಿಕೆಯ ಆಡಳಿತ ಚುಕ್ಕಾಣಿ ಹಿಡಿದಿರುವ ಬಿಜೆಪಿ ಇದರ ವಿರುದ್ಧವಿದೆ.


ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ನಕ್ಷೆ

### ವಿಭಜನೆ ಲೆಕ್ಕಾಚಾರ

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವಿಭಜನೆಗೆ ಸಂಬಂಧಿಸಿ ಸರ್ಕಾರಕ್ಕೆ ವಿವರ ಸಲ್ಲಿಸಲಾಗಿದೆ. ಅದರಂತೆ ಧಾರವಾಡಕ್ಕೆ 1ರಿಂದ 26 ವಾರ್ಡ್ ವ್ಯಾಪ್ತಿ, ವಿಸ್ತೀರ್ಣ 120.94 ಚದರ ಕಿ.ಮೀ. ನಿಗದಿಪಡಿಸಲಾಗಿದೆ. ಈ ಪ್ರದೇಶದ 2023ರ ಯೋಜಿತ ಜನಸಂಖ್ಯೆ 3.65 ಲಕ್ಷ ಇದೆ. ಹುಬ್ಬಳ್ಳಿಗೆ 27ರಿಂದ 82 ವಾರ್ಡ್ (56 ವಾರ್ಡ್‌ಗಳು) ವ್ಯಾಪ್ತಿ, 127.05 ಚದರ ಕಿಲೋ ಮೀಟರ್ ವಿಸ್ತೀರ್ಣ ನಿಗದಿಪಡಿಸಲಾಗಿದೆ. 2023ರ ಯೋಜಿತ ಜನಸಂಖ್ಯೆ 9.60 ಲಕ್ಷ ಇದೆ.


ಧಾರವಾಡದಲ್ಲಿರುವ ಪಾಲಿಕೆ ಕಚೇರಿ

**ಬದಲಾದ ಬಿಜೆಪಿ ನಿಲುವು:** ಮೊದಲು ವಿಭಜನೆ ಪರವಾಗಿದ್ದ ಪಾಲಿಕೆಯ ಬಿಜೆಪಿ ಸದಸ್ಯರ ನಿಲುವು ಈಗ ಏಕಾಏಕಿ ಬದಲಾಗಿದೆ. 'ವಿಭಜನೆಯಾದರೆ ಪಾಲಿಕೆಗೆ ಅನುದಾನ ಕಡಿಮೆ ಆಗಲಿದೆ' ಎಂದು ಹೇಳಿ ಅವರು ಏಪ್ರಿಲ್ 30ರಂದು ನಡೆದ ಪಾಲಿಕೆ ಸಾಮಾನ್ಯ ಸಭೆಯಲ್ಲಿ 'ಪಾಲಿಕೆ ವಿಭಜನೆ' ಕೈಬಿಡಲು ಠರಾವು ಮಾಡಿದರು. ಇದರ ಬೆನ್ನಲ್ಲೇ ಧಾರವಾಡಕ್ಕೆ ಪ್ರತ್ಯೇಕ ಪಾಲಿಕೆಗೆ ಆಗ್ರಹಿಸಿ ಹೋರಾಟ ಶುರುವಾಗಿದೆ.

ವಿಭಜನೆಗೆ ಆಗ ಸಮ್ಮತಿಸಿ, ಈಗ ವರಸೆ ಬದಲಿಸಿರುವ ಬಿಜೆಪಿ ಸದಸ್ಯರು, 'ರಾಜ್ಯದ ಎರಡನೇ ದೊಡ್ಡ ಪಾಲಿಕೆ ಆಗಿರುವ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯನ್ನು ಬೃಹತ್ ಮಹಾನಗರ ಪಾಲಿಕೆ ಆಗಿಸಬೇಕು' ಎಂಬ ಹೊಸ ಆಲೋಚನೆಗೆ ಎಡೆ ಮಾಡಿಕೊಟ್ಟಿದ್ದಾರೆ. ಈ ನಿಲುವಿನಿಂದಾಗಿ ಪ್ರಸ್ತಾವ ನನೆಗುದಿಗೆ ಬಿದ್ದಿದೆ.

'ಪಾಲಿಕೆ ವಿಭಜಿಸದಿದ್ದರೆ ಕೇಂದ್ರ 16ನೇ ಹಣಕಾಸು ಆಯೋಗದಡಿ ವಿಶೇಷ ಅನುದಾನ ಲಭಿಸಲಿದೆ. 10 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ನಗರಗಳಿಗೆ ಹೆಚ್ಚು ಅನುದಾನ ಸಿಗುತ್ತದೆ. ಈ ಪಾಲಿಕೆಯನ್ನು ಬೃಹತ್ ಮಹಾನಗರ ಪಾಲಿಕೆ ದರ್ಜೆಗೇರಿಸುವುದು ಒಳ್ಳೆಯದು' ಎಂಬುದು ಬಿಜೆಪಿ ಸದಸ್ಯರ ವಾದ.

ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಶಾಸಕ ಅರವಿಂದ ಬೆಲ್ಲದ, ವೇದಿಕೆ ಸದಸ್ಯರು ಮಂಗಳವಾರ ರಾಜ್ಯಪಾಲರನ್ನು ಭೇಟಿಯಾಗಿ ಮನವಿ ಸಲ್ಲಿಸಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್, ಶಾಸಕರಾದ ಪ್ರಸಾದ್ ಅಬ್ಬಯ್ಯ, ಎನ್.ಎಚ್.ಕೋನರಡ್ಡಿ ನೇತೃತ್ವದಲ್ಲಿ ಕಾಂಗ್ರೆಸ್ ಮುಖಂಡರು ಮತ್ತು ಸಂಘಟನೆಗಳ ಪ್ರಮುಖರು ಬುಧವಾರ ರಾಜ್ಯಪಾಲರನ್ನು ಭೇಟಿಯಾಗಿ, ಮನವಿಪತ್ರ ಸಲ್ಲಿಸಿದ್ದಾರೆ.


ಧಾರವಾಡಕ್ಕೆ ಪ್ರತ್ಯೇಕ ಮಹಾನಗರ ಪಾಲಿಕೆಗೆ ಆಗ್ರಹಿಸಿ ಹೋರಾಟಗಾರರು ಈಚೆಗೆ ಧಾರವಾಡದ ಜಿಲ್ಲಾಧಿಕಾರಿ ಕಚೇರಿ ಮುಂದೆ ಈಚೆಗೆ ಪ್ರತಿಭಟನೆ ನಡೆಸಿದರು

> ಪಾಲಿಕೆ ವಿಭಜನೆಯಾಗದಿದ್ದರೆ ಕೇಂದ್ರದ 16ನೇ ಹಣಕಾಸು ಆಯೋಗದ ಹೆಚ್ಚು ಅನುದಾನ ಲಭಿಸಲಿದೆ ಎಂಬುದು ಜನರನ್ನು ತಪ್ಪು ದಾರಿಗೆಳೆಯುವ ಪ್ರಯತ್ನ. ಪರಿಣಾಮಕಾರಿ ಆಡಳಿತ ಮತ್ತು ಅಭಿವೃದ್ಧಿಗಾಗಿ ಧಾರವಾಡಕ್ಕೆ ಪ್ರತ್ಯೇಕ ಪಾಲಿಕೆ ರಚನೆಯಾಗಲೇಬೇಕು
>
> **ವೆಂಕಟೇಶ ಮಾಚಕನೂರ,** ಪ್ರತ್ಯೇಕ ಪಾಲಿಕೆ ಹೋರಾಟಗಾರ

> ಧಾರವಾಡಕ್ಕೆ ಪ್ರತ್ಯೇಕ ಪಾಲಿಕೆ ರಚನೆಗೆ ಸರ್ವಾನುಮತದ ನಿರ್ಣಯವಾಗಿದೆ. ರಾಜ್ಯಪಾಲರು ಪ್ರಸ್ತಾವಕ್ಕೆ ಕೂಡಲೇ ಅನುಮೋದನೆ ನೀಡಬೇಕು. ಯಾವ ಪಕ್ಷದವರೂ ಈ ವಿಚಾರದಲ್ಲಿ ರಾಜಕೀಯ ಮಾಡಬಾರದು. ಬೇಡಿಕೆ ಈಡೇರುವವರೆಗೆ ಹೋರಾಟ ಮುಂದುವರಿಸುತ್ತೇವೆ
>
> **ಬಿ.ಡಿ.ಹಿರೇಮಠ,** ವಕೀಲ

> ಆಡಳಿತದಲ್ಲಿ ಹಿಡಿತ, ಉತ್ತಮ ಆಡಳಿತಕ್ಕಾಗಿ ಧಾರವಾಡಕ್ಕೆ ಪ್ರತ್ಯೇಕ ಪಾಲಿಕೆ ರಚಿಸುವುದು ಅಗತ್ಯ. ಆಡಳಿತ ವಿಕೇಂದ್ರೀಕರಣ ಮತ್ತು ಧಾರವಾಡದ ಸಮಗ್ರ ಅಭಿವೃದ್ಧಿ ದೃಷ್ಟಿಯಿಂದ ಧಾರವಾಡಕ್ಕೆ ಪ್ರತ್ಯೇಕ ಪಾಲಿಕೆ ರಚನೆಯ ಸರ್ಕಾರದ ಪ್ರಸ್ತಾವಕ್ಕೆ ರಾಜ್ಯಪಾಲರು ಅನುಮೋದನೆ ನೀಡಬೇಕು
>
> **ಸಂತೋಷ ಲಾಡ್,** ಜಿಲ್ಲಾ ಉಸ್ತುವಾರಿ ಸಚಿವ, ಧಾರವಾಡ

> ಪಾಲಿಕೆಯನ್ನು ಒಡೆದರೆ ಧಾರವಾಡ ಸಣ್ಣ ಪಾಲಿಕೆಯಾಗುತ್ತದೆ. ಇಲ್ಲಿನ ಜನಸಂಖ್ಯೆ ಕಡಿಮೆ ಇದೆ. ಇಲ್ಲಿಗೆ 16ನೇ ಹಣಕಾಸು ಆಯೋಗದಿಂದ ಕಡಿಮೆ ಅನುದಾನ ಲಭಿಸುತ್ತದೆ. ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯನ್ನು ಬೃಹತ್ ಪಾಲಿಕೆಯಾಗಿಸುವುದು ಅಭಿವೃದ್ಧಿ ದೃಷ್ಟಿಯಿಂದ ಒಳ್ಳೆಯದು
>
> **ಈರೇಶ ಅಂಚಟಗೇರಿ,** ಸಭಾ ನಾಯಕ, ಮಹಾನಗರ ಪಾಲಿಕೆ

### ಹಲವು ವರ್ಷಗಳ ಬೇಡಿಕೆ

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ 1962ರಲ್ಲಿ ಅಸ್ತಿತ್ವಕ್ಕೆ ಬಂತು. ಅದಕ್ಕೂ ಮೊದಲು ಎರಡೂ ನಗರಗಳು ಪ್ರತ್ಯೇಕವಾಗಿ ಕಾರ್ಯನಿರ್ವಹಿಸುತ್ತಿದ್ದವು. ಸರ್ ಸಿದ್ದಪ್ಪ ಕಂಬಳಿ, ರಾವ್ ಬಹದ್ದೂರ್ ಬಿ.ಎಲ್. ಪಾಟೀಲ, ದ.ಪ.ಕರ್ಮಕರ, ಜಿ.ಆರ್.ನಲವಡಿ ಮೊದಲಾದ ಘಟಾನುಘಟಿ ನಾಯಕರು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಅಸ್ತಿತ್ವಕ್ಕೆ ತರಲು ಶ್ರಮಿಸಿದ್ದರು. ಜಿ.ಆರ್.ನಲವಡಿ ಅವರು ಮಹಾನಗರ ಪಾಲಿಕೆಯ ಪ್ರಥಮ ಮೇಯರ್ ಆಗಿ ಕಾರ್ಯನಿರ್ವಹಿಸಿದ್ದರು.

ಧಾರವಾಡಕ್ಕೆ ಪ್ರತ್ಯೇಕ ಪಾಲಿಕೆಯಾಗಬೇಕು ಎಂಬುದು ಹಲವು ವರ್ಷಗಳ ಬೇಡಿಕೆ. ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಸಹಿತ ಎಲ್ಲ ಪಕ್ಷಗಳು, ಧಾರವಾಡ ಪ್ರತ್ಯೇಕ ಮಹಾನಗರ ಪಾಲಿಕೆ ಅಭಿವೃದ್ಧಿ ವೇದಿಕೆ, ಧಾರವಾಡಕ್ಕೆ ಪ್ರತ್ಯೇಕ ಮಹಾನಗರ ಪಾಲಿಕೆ ಹೋರಾಟ ವೇದಿಕೆ ಸಹಿತ ವಿವಿಧ ಸಂಘಟನೆಗಳ ಕೂಗು ಇದು. 2018ರಿಂದ ಕೂಗು ಜೋರಾಗಿತ್ತು, ಧಾರವಾಡದಲ್ಲಷ್ಟೇ ಅಲ್ಲ, ಬೆಳಗಾವಿಯಲ್ಲಿ ನಡೆದ ಚಳಿಗಾಲದ ಅಧಿವೇಶನ ಸಂದರ್ಭದಲ್ಲೂ ಪ್ರತಿಭಟನೆಗಳು ನಡೆದಿದ್ದವು. 2023ರಲ್ಲಿ ಕೂಗು ಇನ್ನೂ ಜೋರಾಗಿತ್ತು, ಬಿಜೆಪಿ ಶಾಸಕ ಅರವಿಂದ ಬೆಲ್ಲದ, ಕಾಂಗ್ರೆಸ್‌ನ ವಿನಯ ಕುಲಕರ್ಣಿ ಅಧಿವೇಶನದಲ್ಲಿ ಪ್ರಸ್ತಾಪಿಸಿದ್ದರು.

ಕೇಂದ್ರ ಆಹಾರ ಸಚಿವ, ಧಾರವಾಡ ಸಂಸದ, ಪ್ರಲ್ಹಾದ ಜೋಶಿ, ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ್ ಎಸ್.ಲಾಡ್, ಶಾಸಕ ಅರವಿಂದ ಬೆಲ್ಲದ ಸಹಿತ ಇಲ್ಲಿನ ಎಲ್ಲ ಶಾಸಕರು, ವಿಧಾನ ಪರಿಷತ್ ಸದಸ್ಯರು, ಪಾಲಿಕೆಯ 82 ಸದಸ್ಯರು ಪ್ರತ್ಯೇಕ ಪಾಲಿಕೆ ರಚನೆಗೆ ಒಪ್ಪಿಗೆ ಪತ್ರ ನೀಡಿದ್ದರು. 2024 ನವೆಂಬರ್ 29ರಂದು ನಡೆದ ಪಾಲಿಕೆ ಸಾಮಾನ್ಯ ಸಭೆಯಲ್ಲಿ ಸರ್ವಾನುಮತದ ನಿರ್ಣಯ ಅಂಗೀಕರಿಸಿ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿತ್ತು.

2025ರ ಜನವರಿ 2ರಂದು ರಾಜ್ಯ ಸರ್ಕಾರವು ಸಂಪುಟದಲ್ಲಿ ತೀರ್ಮಾನ ಕೈಗೊಂಡಿತ್ತು, ಧಾರವಾಡಕ್ಕೆ ಪ್ರತ್ಯೇಕ ಪಾಲಿಕೆ ರಚನೆ ಘೋಷಣೆ ಮಾಡಿತ್ತು, ಅಧಿಸೂಚನೆ ಪ್ರಕಟಿಸಿತ್ತು. ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಸಹಿತ ವಿವಿಧ ಪಕ್ಷಗಳವರು, ಹೋರಾಟಗಾರರು ಸ್ವಾಗತಿಸಿದ್ದರು.

ರಾಜ್ಯ ಸರ್ಕಾರ ಏಪ್ರಿಲ್‌ನಲ್ಲಿ ಪ್ರತ್ಯೇಕ ಪಾಲಿಕೆ ರಚನೆ ಪ್ರಸ್ತಾವವನ್ನು ರಾಜ್ಯಪಾಲರ ಅನುಮೋದನೆಗೆ ಕಳುಹಿಸಿತ್ತು, ರಾಜ್ಯಪಾಲರು ಪ್ರಸ್ತಾವಕ್ಕೆ ಆಕ್ಷೇಪಣೆಯನ್ನೂ ವ್ಯಕ್ತಪಡಿಸಿಲ್ಲ, ತಿರಸ್ಕರಿಸಿಯೂ ಇಲ್ಲ, ಅನುಮೋದನೆಯನ್ನೂ ನೀಡಿಲ್ಲ.

ಧಾರವಾಡಕ್ಕೆ ಪ್ರತ್ಯೇಕ ಪಾಲಿಕೆ ರಚನೆಯಾದರೆ ರಾಜಕೀಯ ಲಾಭ ಕಾಂಗ್ರೆಸ್ ಪಾಲಾಗಲಿದೆ ಎಂಬ ಕಾರಣಕ್ಕೆ ಅನುದಾನದ ಕುಂಟು ನೆಪವೊಡ್ಡಿ ಸಚಿವ ಪ್ರಲ್ಹಾದ ಜೋಶಿ ಮತ್ತು ಅರವಿಂದ ಬೆಲ್ಲದ ಅವರು ರಾಜ್ಯಪಾಲರಿಂದ ಪ್ರಸ್ತಾವ ತಡೆಹಿಡಿಸಿ ಅಡ್ಡಗಾಲು ಹಾಕಿದ್ದಾರೆ ಎಂಬುದು ಕಾಂಗ್ರೆಸ್‌ನವರ ಆರೋಪ.

**ರಾಜ್ಯಪಾಲರಿಗೆ ಪತ್ರ:** ಪ್ರತ್ಯೇಕ ಪಾಲಿಕೆ ಪ್ರಸ್ತಾವವನ್ನು ಕೈಬಿಡುವಂತೆ ರಾಜ್ಯ ಸರ್ಕಾರಕ್ಕೆ ಸಲಹೆ ನೀಡಬೇಕು ಎಂದು ರಾಜ್ಯಪಾಲರಿಗೆ ವಿಧಾನಸಭೆ ವಿರೋಧ ಪಕ್ಷದ ಉಪನಾಯಕರೂ ಆಗಿರುವ ಶಾಸಕ ಅರವಿಂದ ಬೆಲ್ಲದ ಅವರು ಕೆಲ ದಿನಗಳ ಹಿಂದೆ ಪತ್ರ ಬರೆದಿದ್ದರು.

# ವ್ಯಾಪಾರ, ಹೂಡಿಕೆ: ಸಹಕಾರ ವೃದ್ಧಿಗೆ ಪಣ

## ಜಂಟಿ ಪತ್ರಿಕಾ ಪ್ರಕಟಣೆಯಲ್ಲಿ ಮೋದಿ, ಮೆಲೊನಿ ಹೇಳಿಕೆ • ಭಾರತ–ಪಶ್ಚಿಮ ಏಷ್ಯಾ–ಯುರೋಪ್ ಆರ್ಥಿಕ ಕಾರಿಡಾರ್‌ಗೆ ಒತ್ತು

ರೋಮ್(ಪಿಟಿಐ): ವ್ಯಾಪಾರ, ಹೂಡಿಕೆ ಹಾಗೂ ಹೊಸ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಸಹಕಾರ ವೃದ್ಧಿಸಲು ಹಾಗೂ ಮೈತ್ರಿಯನ್ನು ವಿಶೇಷ ಪಾಲುದಾರಿಕೆ ಮಟ್ಟಕ್ಕೆ ಕೊಂಡೊಯ್ಯಲು ಭಾರತ ಹಾಗೂ ಇಟಲಿ ಮಂಗಳವಾರ ನಿರ್ಧರಿಸಿದವು.

ಪ್ರಧಾನಿ ನರೇಂದ್ರ ಮೋದಿ ಹಾಗೂ ಇಟಲಿ ಪ್ರಧಾನಿ ಜಾರ್ಜಿಯಾ ಮೆಲೊನಿ ಅವರು ಮಾತುಕತೆ ನಡೆಸಿದ ಬಳಿಕ ಬಿಡುಗಡೆ ಮಾಡಿರುವ ಜಂಟಿ ಹೇಳಿಕೆಯಲ್ಲಿ ಈ ಮಾತು ಹೇಳಿದ್ದಾರೆ.

ಮೆಲೊನಿ ಅವರ ಜೊತೆ ಮಾತುಕತೆಗೂ ಮುನ್ನ ಮಾತನಾಡಿದ ಮೋದಿ, 'ಭಾರತ ಮತ್ತು ಇಟಲಿ ನಡುವಿನ ಸಹಕಾರ ವೃದ್ಧಿ ಕುರಿತು ಮಾತುಕತೆ ನಡೆಸಲಾಗುವುದು. ವಿಶೇಷವಾಗಿ ಭಾರತ-ಪಶ್ಚಿಮ ಏಷ್ಯಾ-ಯುರೋಪ್ ಆರ್ಥಿಕ ಕಾರಿಡಾರ್(ಐಎಂಇಸಿ) ಯೋಜನೆಗೆ ಒತ್ತು ನೀಡಲಾಗುವುದು' ಹೇಳಿದರು.

'ಜಂಟಿ ಕ್ರಿಯಾ ಯೋಜನೆ 2025-2029 ಅನ್ನು ಉಭಯ ದೇಶಗಳು ಮರುಪರಿಶೀಲನೆ ನಡೆಸಲಿವೆ. ಆ ಮೂಲಕ ವಿವಿಧ ಕ್ಷೇತ್ರಗಳಲ್ಲಿನ ಸಹಕಾರ ವೃದ್ಧಿಗೆ ಸಮಗ್ರ ಯೋಜನೆಯನ್ನು ಸಿದ್ಧಪಡಿಸಿದಂತಾಗಲಿದೆ' ಎಂದು ಮೋದಿ ಅವರು ಹೇಳಿದ್ದಾರೆ.

**ದ್ವಿಪಕ್ಷೀಯ ವ್ಯಾಪಾರ ಗಟ್ಟಿ:** ಐರೋಪ್ಯ ಒಕ್ಕೂಟದಲ್ಲಿ, ಇಟಲಿಯು ಭಾರತದ ನಾಲ್ಕನೇ ಅತಿದೊಡ್ಡ ವ್ಯಾಪಾರ ಪಾಲುದಾರ ರಾಷ್ಟ್ರ. ಭಾರತ ಮತ್ತು ಇಟಲಿ ನಡುವಿನ ದ್ವಿಪಕ್ಷೀಯ ವ್ಯಾಪಾರವು ಇತ್ತೀಚಿನ ವರ್ಷಗಳಲ್ಲಿ ಏರಿಕೆ ಕಂಡಿದೆ. 2025ರಲ್ಲಿ ಉಭಯ ದೇಶಗಳ ನಡುವಿನ ವ್ಯಾಪಾರವು

### 'ನಿರ್ಣಾಯಕ ಹಂತಕ್ಕೆ ಭಾರತ, ಇಟಲಿ ಬಾಂಧವ್ಯ'

**ನವದೆಹಲಿ:** 'ಭಾರತ ಮತ್ತು ಇಟಲಿ ನಡುವಿನ ಬಾಂಧವ್ಯ ಈಗ ನಿರ್ಣಾಯಕ ಹಂತ ತಲುಪಿದೆ. ಉಭಯ ದೇಶಗಳ ನಡುವಿನ ಸೌಹಾರ್ದಯುತ ಮೈತ್ರಿಯು ಈಗ ವಿಶೇಷವಾದ ರಕ್ಷಣಾತ್ಮಕ ಪಾಲುದಾರಿಕೆಯಾಗಿ ಹೊರಹೊಮ್ಮಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಹಾಗೂ ಇಟಲಿಯ ಪ್ರಧಾನಿ ಜಾರ್ಜಿಯಾ ಮೆಲೊನಿ ಪ್ರತಿಪಾದಿಸಿದ್ದಾರೆ.

ಉಭಯ ನಾಯಕರು, ಭಾರತ ಮತ್ತು ಇಟಲಿ ಮಾಧ್ಯಮಗಳಿಗೆ ಜಂಟಿಯಾಗಿ ಬರೆದಿರುವ ಲೇಖನದಲ್ಲಿ ಈ ಕುರಿತು ಉಲ್ಲೇಖಿಸಿದ್ದಾರೆ.

'ಇತ್ತೀಚಿನ ದಿನಗಳಲ್ಲಿ ಅಂತರರಾಷ್ಟ್ರೀಯ ಸಂಬಂಧಗಳು ಹಾಗೂ ವ್ಯವಸ್ಥೆಯಲ್ಲಿ ಗಮನಾರ್ಹ ಬದಲಾವಣೆಗಳು ಕಂಡುಬರುತ್ತಿವೆ. ಆದರೆ, ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿ ನಿರಂತರ ವಿನಿಮಯಗಳಿಂದಾಗಿ ಭಾರತ ಮತ್ತು ಇಟಲಿ ನಡುವಿನ ಪಾಲುದಾರಿಕೆ ಗಟ್ಟಿಗೊಂಡಿದೆ' ಎಂದು ಮೋದಿ ಹಾಗೂ ಮೆಲೊನಿ ಹೇಳಿದ್ದಾರೆ.

'ಕ್ರಿಯಾಶೀಲವಾದ ಆರ್ಥಿಕತೆ, ಸೃಜನಶೀಲತೆಯಿಂದ ಕೂಡಿದ ಸಾಮಾಜಿಕ ವ್ಯವಸ್ಥೆ ಹಾಗೂ ಶತಮಾನಗಳಷ್ಟು ಹಳೆಯದಾದ ನಮ್ಮ ನಾಗರಿಕತೆಗಳು ಹೊಂದಿರುವ ಜ್ಞಾನ ಮತ್ತು ಅನುಭವದಿಂದಾಗಿ ಉಭಯ ದೇಶಗಳ ನಡುವಿನ ಬಾಂಧವ್ಯ ಹೊಸ ಎತ್ತರಕ್ಕೆ ಏರಿದೆ' ಎಂದು ಅವರು ಬರೆದಿದ್ದಾರೆ.

'ಉಭಯ ದೇಶಗಳ ನಡುವಿನ ಬಾಂಧವ್ಯವನ್ನು ಮತ್ತಷ್ಟು ಸದೃಢಗೊಳಿಸಲು ನಾವು ಬದ್ಧರಾಗಿದ್ದೇವೆ. ವಿನ್ಯಾಸ ಹಾಗೂ ತಯಾರಿಕೆ ಕ್ಷೇತ್ರದಲ್ಲಿ ಇಟಲಿಯ ಸಾಮರ್ಥ್ಯ ಅಗಾಧವಾದುದು. ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಯಾದ ಭಾರತದಲ್ಲಿ ಎಂಜಿನಿಯರಿಂಗ್ ಪ್ರತಿಭೆಗಳಿಗೆ ಕೊರತೆ ಇಲ್ಲ. ಉದ್ಯಮಶೀಲತೆಗೆ ಪೂರಕವಾದ ಪರಿಸರವೂ ಇದೆ. ಈ ಸಾಮರ್ಥ್ಯಗಳನ್ನು ಬಳಸಿಕೊಂಡು ಪ್ರಗತಿ ಸಾಧಿಸುವುದು ಎರಡೂ ದೇಶಗಳ ಗುರಿಯಾಗಿದೆ' ಎಂದು ಅವರು ಲೇಖನದಲ್ಲಿ ವಿವರಿಸಿದ್ದಾರೆ.

### ಲೇಖನದ ಪ್ರಮುಖ ಅಂಶಗಳು

- ಭಾರತ ಮತ್ತು ಇಟಲಿ ನಡುವಿನ ವ್ಯಾಪಾರದ ಪ್ರಮಾಣವನ್ನು 2029ರ ವೇಳೆಗೆ ₹2.24 ಲಕ್ಷ ಕೋಟಿಗೆ ತಲುಪಿಸುವ ಗುರಿ ಹೊಂದಲಾಗಿದೆ
- ರಕ್ಷಣೆ, ಏರೋಸ್ಪೇಸ್, ಶುದ್ಧ ತಂತ್ರಜ್ಞಾನಗಳು, ಆಟೊಮೊಟಿವ್ ಬಿಡಿಭಾಗಗಳ ತಯಾರಿಕೆ, ರಾಸಾಯನಿಕಗಳು, ಔಷಧಗಳು, ಜವಳಿ, ಕೃಷಿ ಹಾಗೂ ಪ್ರವಾಸೋದ್ಯಮ ಕ್ಷೇತ್ರಗಳನ್ನು ಕೇಂದ್ರೀಕರಿಸಿ ಕಾರ್ಯನಿರ್ವಹಣೆ
- ಕೃತಕ ಬುದ್ಧಿಮತ್ತೆಯ(ಎ.ಐ) ಅಭಿವೃದ್ಧಿ ಮತ್ತು ಬಳಕೆಯು ಮಾನವ ಕೇಂದ್ರಿತವಾಗಿರಬೇಕು. ಇದನ್ನು ಖಾತ್ರಿಪಡಿಸಲು ಉಭಯ ದೇಶಗಳು ಶ್ರಮಿಸಲಿವೆ
- ಡಿಜಿಟಲ್ ಕ್ಷೇತ್ರದಲ್ಲಿ ಸಹಕಾರ, ಸೈಬರ್ ಮೂಲಸೌಕರ್ಯ ಅಭಿವೃದ್ಧಿಗೆ ಒತ್ತು
- ಭಾರತವು ಬಾಹ್ಯಾಕಾಶ ಮತ್ತು ಉಪಗ್ರಹ ತಂತ್ರಜ್ಞಾನದಲ್ಲಿ ಗಮನಾರ್ಹ

## ಇಟಲಿ ಪ್ರಧಾನಿಗೆ 'ಮೆಲೋಡಿ' ಉಡುಗೊರೆ

ರೋಮ್/ನವದೆಹಲಿ (ರಾಯಿಟರ್ಸ್/ಪಿಟಿಐ): ಇಟಲಿ ಪ್ರವಾಸದ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರು ಅಲ್ಲಿನ ಪ್ರಧಾನಿ ಜಾರ್ಜಿಯಾ ಮೆಲೊನಿಯವರಿಗೆ 'ಮೆಲೋಡಿ' ಚಾಕೊಲೆಟ್ ಪ್ಯಾಕೆಟ್‌ಅನ್ನು ಉಡುಗೊರೆಯಾಗಿ ನೀಡಿದ್ದು, ಇದು ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಸದ್ದು ಮಾಡಿದೆ.

ಈ ವಿದ್ಯಮಾನ ಕುರಿತ ಮೀಮ್‌ಗಳು ವ್ಯಾಪಕವಾಗಿ ಹರಿದಾಡುತ್ತಿವೆ. ತರಹೇವಾರಿ ಪ್ರತಿಕ್ರಿಯೆಗಳು ವ್ಯಕ್ತವಾಗುತ್ತಿವೆ. ಹಲವರು ಈ ಬಗ್ಗೆ ಟೀಕೆಯನ್ನೂ ಮಾಡಿದ್ದಾರೆ.

ಈ ಉಡುಗೊರೆ ನೀಡಿದ್ದಕ್ಕಾಗಿ ಮೋದಿಯವರಿಗೆ ಧನ್ಯವಾದ ಹೇಳಿರುವ ಮೆಲೊನಿ, ಈ ಕುರಿತ ವಿಡಿಯೊವೊಂದನ್ನು ಸಾಮಾಜಿಕ ಜಾಲತಾಣದ ತಮ್ಮ ಖಾತೆಯಲ್ಲಿ ಹಂಚಿಕೊಂಡಿದ್ದಾರೆ.

ಹಂಚಿಕೊಂಡ ಆರು ಗಂಟೆಯಲ್ಲಿ 11 ಕೋಟಿಗೂ ಹೆಚ್ಚು ಜನರು ಈ ವಿಡಿಯೊ ವೀಕ್ಷಿಸಿರುವುದು ಗಮನಾರ್ಹ. ಸಾವಿರಾರು ಜನರು ಈ ವಿಡಿಯೊವನ್ನು ಹಂಚಿಕೊಂಡಿದ್ದಾರೆ.

'ಪ್ರಧಾನಿ ಮೋದಿಯವರು ಬಹಳ ಸ್ವಾದಿಷ್ಟವಾದ ಟಾಫಿಯನ್ನು ಉಡುಗೊರೆಯಾಗಿ ತಂದಿದ್ದಾರೆ. ಈ ಉಡುಗೊರೆಗಾಗಿ ಧನ್ಯವಾದ' ಎಂದು ಮೆಲೊನಿಯವರು ಹೇಳಿರುವುದು ವಿಡಿಯೊದಲ್ಲಿದೆ. ಈ ವಿಡಿಯೊದಲ್ಲಿ ಮೋದಿಯವರೂ ಇದ್ದಾರೆ. ಮೆಲೊನಿಯವರ ಹಾಸ್ಯ ಚಟಾಕಿಗೆ ಅವರು ಜೋರಾಗಿ ನಕ್ಕಿದ್ದಾರೆ.

2023ರಲ್ಲಿ ದುಬೈನಲ್ಲಿ ನಡೆದಿದ್ದ 'ಸಿಒಪಿ28' ಶೃಂಗಸಭೆಯಲ್ಲಿ ಪಾಲ್ಗೊಂಡಿದ್ದ ವೇಳೆ, ಮೆಲೊನಿಯವರು ಹ್ಯಾಷ್‌ಟ್ಯಾಗ್‌ನೊಂದಿಗೆ 'ಮೆಲೊಡಿ' ಎಂದು ಮಾಡಿದ್ದ ಪೋಸ್ಟ್ ಭಾರಿ ಹರಿದಾಡಿತ್ತು.

ಮೆಲೊನಿ ಮತ್ತು ಮೋದಿ ಹೆಸರಿನ ಆಯ್ದ ಅಕ್ಷರಗಳನ್ನು ಜೋಡಿಸಿ ಮೆಲೊನಿಯವರು ಟಂಕಿಸಿದ್ದ ಪದವೇ 'ಮೆಲೊಡಿ'.



ಮೋದಿ ಅವರು ಇಟಲಿ ಪ್ರಧಾನಿ ಜಾರ್ಜಿಯಾ ಮೆಲೊನಿ ಅವರಿಗೆ ಭಾರತದ ಚಾಕೊಲೇಟ್ ಮೆಲೋಡಿಯ ಪ್ಯಾಕೆಟ್‌ಅನ್ನು ಉಡುಗೊರೆಯಾಗಿ ನೀಡಿದರು ಪಿಟಿಐ ಚಿತ್ರ

### ಪ್ರಶಂಸೆ... ಹಲವು ಪ್ರಶ್ನೆ

'ಮೆಲೋಡಿ'ಯ ಪ್ಯಾಕೆಟ್ ಅನ್ನು ಉಡುಗೊರೆಯಾಗಿ ನೀಡಿದ ಮೋದಿಯವರ ಒಂದು ನಡೆ ಸಾಮಾಜಿಕ ಜಾಲತಾಣದಲ್ಲಿ ಈ ಮಟ್ಟಿಗೆ ಸದ್ದು ಮಾಡಿದೆಯೇ? ಎಂದು ಹಲವರು ಅಚ್ಚರಿ ವ್ಯಕ್ತಪಡಿಸಿದ್ದಾರೆ.

ಇನ್ನೂ ಕೆಲವರು ಇಂತಹ ನಡೆಯನ್ನೇ ಟೀಕಿಸಿದ್ದಾರೆ.

'ಇಬ್ಬರು ಪ್ರಧಾನಿಗಳು ಸಾರ್ವಜನಿಕವಾಗಿ ಈ ರೀತಿ ನಡೆದುಕೊಳ್ಳಬಹುದೇ' ಎಂಬ ಪ್ರಶ್ನೆಯನ್ನು ಹಲವರು ಜಿಗಿಯಿತು. ಒಂದು ಹಂತದಲ್ಲಿ ಕಂಪನಿಯ ಷೇರುಗಳನ್ನು ಮಾರುವವರೇ ಇಲ್ಲವಾಗಿದ್ದರು, ಎಲ್ಲರೂ ಖರೀದಿಸಲು ಬಯಸುತ್ತಿದ್ದರು!

ದಿನದ ವಹಿವಾಟು ಆರಂಭವಾದಾಗ ಪಾರ್ಲೆ ಇಂಡಸ್ಟ್ರೀಸ್ ಲಿಮಿಟೆಡ್‌ನ ಷೇರುಗಳಿಗೆ ಅಷ್ಟೇನೂ ಬೇಡಿಕೆ ಇರಲಿಲ್ಲ. ಆದರೆ, ಇಟಲಿಯಲ್ಲಿ ಉಡುಗೊರೆ ಪ್ರಸಂಗ ವರದಿಯಾದ ನಂತರ ಹೂಡಿಕೆದಾರರು ಒಂದು ಕ್ಷಣವನ್ನೂ ವ್ಯರ್ಥ ಮಾಡದೆ ಷೇರು ಖರೀದಿಗೆ ಮುಂದಾದರು.

ಆದರೆ, ಹೂಡಿಕೆದಾರರು ಖರೀದಿಸಿದ್ದುದು ಬಿಸ್ಕತ್ತು,

## ಭಾರತದ ಆರ್ಥಿಕತೆಯ ಬೆಳವಣಿಗೆ ಶೇ 6.4ರಷ್ಟು ಇರಬಹುದು: ವಿಶ್ವಸಂಸ್ಥೆ

# ಜಿಡಿಪಿ ಬೆಳವಣಿಗೆ ಅಂದಾಜು ಇಳಿಕೆ

ವಿಶ್ವಸಂಸ್ಥೆ (ಪಿಟಿಐ): ಭಾರತದ ಅರ್ಥ ವ್ಯವಸ್ಥೆಯ 2026ರ ಬೆಳವಣಿಗೆ ದರದ ಅಂದಾಜನ್ನು ವಿಶ್ವಸಂಸ್ಥೆಯು ಶೇ 6.4ಕ್ಕೆ ತಗ್ಗಿಸಿದೆ. ಇದು ಈ ಹಿಂದಿನ ಅಂದಾಜು ಆಗಿದ್ದ ಶೇ 6.6ಕ್ಕೆ ಹೋಲಿಸಿದರೆ ಕಡಿಮೆ.

ಪಶ್ಚಿಮ ಏಷ್ಯಾದಲ್ಲಿನ ಯುದ್ಧದ ಕಾರಣದಿಂದಾಗಿ ಜಾಗತಿಕ ಅರ್ಥ ವ್ಯವಸ್ಥೆಗೆ ಬಿದ್ದಿರುವ ಏಟುಗಳು ಹಾಗೂ ಅನಿಶ್ಚಿತತೆಗಳು ಅಂದಾಜನ್ನು ತಗ್ಗಿಸುವುದಕ್ಕೆ ಕಾರಣ ಎಂದು ವಿಶ್ವಸಂಸ್ಥೆ ಹೇಳಿದೆ.

ವಿಶ್ವಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ವ್ಯವಹಾರಗಳ ಇಲಾಖೆ (ಯುಎನ್ ಡಿಇಎಸ್‌ಎ) ಬಿಡುಗಡೆ ಮಾಡಿರುವ ವರದಿಯ ಪ್ರಕಾರ, ಅಂದಾಜು ಇಳಿಕೆ ಮಾಡಲಾಗಿದ್ದರೂ ಜಗತ್ತಿನ ಪ್ರಮುಖ ಅರ್ಥ ವ್ಯವಸ್ಥೆಗಳ ಪೈಕಿ ಅತ್ಯಂತ ವೇಗದ ಬೆಳವಣಿಗೆ ಕಾಣುವ ದೇಶಗಳ ಸಾಲಿನಲ್ಲಿ ಭಾರತಕ್ಕೆ ಸ್ಥಾನ ಇದ್ದೇ ಇರಲಿದೆ.

ಯುದ್ಧವು ಜಾಗತಿಕ ಆರ್ಥಿಕತೆಗೆ ಇನ್ನೊಂದು ಪೆಟ್ಟು ಕೊಟ್ಟಿದೆ. ಬೆಳವಣಿಗೆ ದರವನ್ನು ತಗ್ಗಿಸಿದೆ. ಅನಿಶ್ಚಿತತೆಯನ್ನು ಹೆಚ್ಚು ಮಾಡಿದೆ ಹಾಗೂ ಹಣದುಬ್ಬರ ಜಾಸ್ತಿಯಾಗುವ ಅಪಾಯ ಉಂಟುಮಾಡಿದೆ ಎಂದು ವರದಿಯು ತಿಳಿಸಿದೆ.

**ಮುಖ್ಯಾಂಶಗಳು**

- ಪಶ್ಚಿಮ ಏಷ್ಯಾದ ಬಿಕ್ಕಟ್ಟು, ಜಿಡಿಪಿ ಅಂದಾಜು ತಗ್ಗಿಸಲು ಕಾರಣ
- ವೇಗದ ಬೆಳವಣಿಗೆಯ ಅರ್ಥ ವ್ಯವಸ್ಥೆಯಾಗಿ ಇರಲಿದೆ ಭಾರತ
- 2027ರಲ್ಲಿ ದೇಶದ ಬೆಳವಣಿಗೆ ದರವು ಶೇ 6.6ರಷ್ಟಾಗಬಹುದು




ಪಶ್ಚಿಮ ಏಷ್ಯಾ ಯುದ್ಧದ ಸಮಸ್ಯೆಯು ಎಲ್ಲ ದೇಶಗಳ ಮೇಲೆಯೂ ಎರಡು ಬಗೆಯ ಪರಿಣಾಮಗಳನ್ನು ಉಂಟುಮಾಡುತ್ತಿದೆ. ಬೆಳವಣಿಗೆ ಪ್ರಮಾಣವನ್ನು ತಗ್ಗಿಸುತ್ತಿದೆ ಮತ್ತು ಅದೇ ಸಂದರ್ಭದಲ್ಲಿ ಹಣದುಬ್ಬರ ಹೆಚ್ಚಾಗುವಂತೆ ಮಾಡುತ್ತಿದೆ. ಹೀಗೆ ಮಾಡುವ ಮೂಲಕ ಈ ಸಂಘರ್ಷವು ಸರ್ಕಾರಗಳಿಗೆ ಹೊಸ ತೀರ್ಮಾನಗಳನ್ನು ತೆಗೆದುಕೊಳ್ಳಲು ಹೆಚ್ಚಿನ ಅವಕಾಶಗಳು ಇಲ್ಲದಂತೆ ಮಾಡುತ್ತಿದೆ. ಭಾರತದಲ್ಲಿಯೂ ಇದೇ ಸ್ಥಿತಿ ಇರಲಿದೆ ಎಂದು 'ಯುಎನ್ ಡಿಇಎಸ್‌ಎ' ಜಾಗತಿಕ ಆರ್ಥಿಕತೆ ಕಣ್ಗಾವಲು ವಿಭಾಗದ ಹಿರಿಯ ಅರ್ಥಶಾಸ್ತ್ರಜ್ಞ ಇಂಗೊ ಪಿಟರ್ಲೆ ಹೇಳಿದ್ದಾರೆ.

'ಭಾರತದಲ್ಲಿ ರಾಚನಿಕವಾಗಿ ಬಹಳ ಒಳ್ಳೆಯ ಬೆಳವಣಿಗೆ ಆಗಿದೆ. ಗ್ರಾಹಕರಿಂದ ಉತ್ತಮ ಬೇಡಿಕೆ ಬಂದಿರುವುದು, ಸರ್ಕಾರದ ಕಡೆಯಿಂದ ಉತ್ತಮ ಹೂಡಿಕೆ ಆಗಿರುವುದು, ಸೇವಾ ವಲಯದಲ್ಲಿ ಉತ್ತಮ ರಫ್ತು ವಹಿವಾಟು ನಡೆದಿರುವುದು ಇದಕ್ಕೆ ಮುಖ್ಯ ಕಾರಣ. ಬೇಡಿಕೆ, ಹೂಡಿಕೆ ಮತ್ತು ಸೇವಾ ವಲಯದ ಚಟುವಟಿಕೆಗಳು ಬಹುಮಟ್ಟಿಗೆ ಚೆನ್ನಾಗಿಯೇ ಇರಲಿವೆ. ಹೀಗಾಗಿ, ಭಾರತವು ಜಗತ್ತಿನಲ್ಲಿ ಅತ್ಯಂತ ಹೆಚ್ಚಿನ ಪ್ರಮಾಣದ ಬೆಳವಣಿಗೆ ಸಾಧಿಸುವ ದೇಶಗಳ ಪೈಕಿ ಒಂದಾಗಿರಲಿದೆ' ಎಂದು ಅವರು ಹೇಳಿದ್ದಾರೆ.

2027ರಲ್ಲಿ ದೇಶದ ಬೆಳವಣಿಗೆ ದರವು ಶೇ 6.6ರ ಮಟ್ಟಕ್ಕೆ ಏರಬಹುದು ಎಂದು ವರದಿಯು ಅಂದಾಜು ಮಾಡಿದೆ.

## 96.86ರ ಮಟ್ಟಕ್ಕೆ ರೂಪಾಯಿ ಮೌಲ್ಯ

ಮುಂಬೈ (ಪಿಟಿಐ): ಬುಧವಾರದ ವಹಿವಾಟಿನಲ್ಲಿ ರೂಪಾಯಿ ಮೌಲ್ಯವು ಇನ್ನಷ್ಟು ಕುಸಿದಿದ್ದು, ಅಮೆರಿಕದ ಡಾಲರ್ ಎದುರು ಇದುವರೆಗಿನ ಕನಿಷ್ಠ ಮಟ್ಟವಾದ 96.86ಕ್ಕೆ ತಲುಪಿದೆ.



ಕಚ್ಚಾ ತೈಲದ ಬೆಲೆಯು ಕಡಿಮೆ ಆಗದಿರುವುದು ಹಾಗೂ ಹಣದುಬ್ಬರ ಹೆಚ್ಚಳದ ಭೀತಿಯು ರೂಪಾಯಿ ಮೌಲ್ಯ ಕುಸಿತಕ್ಕೆ ಕಾರಣವಾದವು. ಬುಧವಾರ ರೂಪಾಯಿ ಮೌಲ್ಯವು 16 ಪೈಸೆ ಕುಸಿದಿದೆ. ಸತತ ಒಂಬತ್ತು ವಹಿವಾಟಿನ ದಿನಗಳಿಂದ ರೂಪಾಯಿಯು ಡಾಲರ್ ಎದುರು ಕುಸಿಯುತ್ತಿದೆ.

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ರೂಪಾಯಿ ಮೌಲ್ಯವು ದಿನದ ವಹಿವಾಟಿನ ನಡುವಿನಲ್ಲಿ 96.95ರ ಮಟ್ಟದವರೆಗೂ ಕುಸಿದಿತ್ತು. ನಂತರ ತುಸು ಚೇತರಿಕೆ ಕಂಡಿತು. ಮಂಗಳವಾರದ ವಹಿವಾಟಿನಲ್ಲಿ ಮೌಲ್ಯವು 50 ಪೈಸೆಯಷ್ಟು ಇಳಿದಿತ್ತು.

'ಡಾಲರ್ ಬಲವರ್ಧನೆ, ಅಮೆರಿಕದ ಬಾಂಡ್ ಗಳಿಕೆಯು ಹೆಚ್ಚಾಗಿರುವುದು ರೂಪಾಯಿ ಮೌಲ್ಯ ಇಳಿಕೆಗೆ ಕಾರಣವಾದವು' ಎಂದು ಮಿರೈ ಅಸೆಟ್ ಶೇರ್‌ಖಾನ್ ಸಂಸ್ಥೆಯ ಸರಕುಗಳ ಸಂಶೋಧನಾ ವಿಭಾಗದ ವಿಶ್ಲೇಷಕ ಅನುಜ್ ಚೌಧರಿ ಹೇಳಿದ್ದಾರೆ.

ರೂಪಾಯಿ ಮೌಲ್ಯವು ತೀವ್ರವಾಗಿ ಕುಸಿಯುತ್ತಿರುವುದು ನೀತಿ ನಿರೂಪಕರಿಗೆ, ಹೂಡಿಕೆದಾರರಿಗೆ ಹಾಗೂ ಉದ್ದಿಮೆಗಳಿಗೆ ಬಹಳ ದೊಡ್ಡ ಆರ್ಥಿಕ ಎಚ್ಚರಿಕೆಯಾಗಿ ಕಾಣಿಸುತ್ತಿದೆ. ಹಿಂದೊಂದು ಸಂದರ್ಭದಲ್ಲಿ ಏಷ್ಯಾದ ಅತ್ಯಂತ ಸ್ಥಿರವಾದ ಕರೆನ್ಸಿ ಆಗಿದ್ದ ರೂಪಾಯಿಯು ಈ ವರ್ಷದಲ್ಲಿ ಪ್ರವರ್ಧಮಾನಕ್ಕೆ ಬರುತ್ತಿರುವ ದೇಶಗಳ ಕರೆನ್ಸಿಗಳ ಪೈಕಿ ಅತ್ಯಂತ ಕಳಪೆ ಪ್ರದರ್ಶನ ನೀಡಿದ ಕರೆನ್ಸಿಗಳಲ್ಲಿ ಒಂದಾಗಿದೆ.

ಕಚ್ಚಾ ತೈಲದ ಬೆಲೆ ಏರಿಕೆ, ದೇಶದಿಂದ ಬಂಡವಾಳದ ನಿರಂತರ ಹೊರಹರಿವು ಮತ್ತು ಹೆಚ್ಚುತ್ತಿರುವ ವ್ಯಾಪಾರ ಕೊರತೆ ಅಂತರ, ಡಾಲರ್ ಬಲವರ್ಧನೆಯು ರೂಪಾಯಿ ಮೌಲ್ಯ ಇಳಿಕೆಗೆ ಕಾರಣವಾಗುತ್ತಿವೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

## ತುಮಕೂರಿನಲ್ಲಿ ಮಾನ್+ಹುಮ್ಮೆಲ್‌ನ ತಂತ್ರಜ್ಞಾನ ಕೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜರ್ಮನಿ ಮೂಲದ ಮಾನ್ + ಹುಮ್ಮೆಲ್ ಕಂಪನಿಯು ತುಮಕೂರಿನಲ್ಲಿ ಅತ್ಯಾಧುನಿಕ 'ಜಾಗತಿಕ ತಂತ್ರಜ್ಞಾನ ಮತ್ತು ನಾವೀನ್ಯ ಕೇಂದ್ರ' ಆರಂಭಿಸಲಿದೆ.

ಕಂಪನಿಯು ವಾಹನಗಳು, ಕೈಗಾರಿಕೆಗಳಲ್ಲಿ ಬಳಕೆಯಾಗುವ ಶುದ್ಧೀಕರಣ ಉತ್ಪನ್ನಗಳನ್ನು ತಯಾರಿಸುತ್ತದೆ. ತುಮಕೂರಿನಲ್ಲಿ ಗುರುವಾರ ಆರಂಭವಾಗಲಿರುವ ಕೇಂದ್ರವು ಕಂಪನಿಯ ಪಾಲಿಗೆ ಜರ್ಮನಿಯ ಹೊರಗಿನ ಅತಿದೊಡ್ಡ ತಂತ್ರಜ್ಞಾನ ಮತ್ತು ನಾವೀನ್ಯ ಕೇಂದ್ರ ಎಂದು ಕಂಪನಿಯ ಭಾರತದ ವ್ಯವಸ್ಥಾಪಕ ನಿರ್ದೇಶಕ ಸುದೀಶ್ ಕರಿಬಿಂಗಲ್ ಪತ್ರಿಕಾಗೋಷ್ಠಿಯಲ್ಲಿ ಬುಧವಾರ ಹೇಳಿದರು.

ಕಂಪನಿಯು ದೇಶದಲ್ಲಿ ತನ್ನ ಕಾರ್ಯಾಚರಣೆಯನ್ನು ಮತ್ತಷ್ಟು ವಿಸ್ತರಿಸಲು ಮುಂದಾಗಿದೆ. ಇದಕ್ಕಾಗಿ ₹100 ಕೋಟಿ ಹೂಡಿಕೆ ಮಾಡಲಿದೆ. ಎಂಜಿನಿಯರಿಂಗ್, ನಾವೀನ್ಯ ಮತ್ತು ಸುಧಾರಿತ ಫಿಲ್ಟರೇಶನ್ ತಂತ್ರಜ್ಞಾನಗಳಿಗೆ ಭಾರತವನ್ನು ಪ್ರಮುಖ ಕೇಂದ್ರವನ್ನಾಗಿ ಮಾಡಲಿದೆ. ಸುಧಾರಿತ ಸಂಶೋಧನಾ ಪ್ರಯೋಗಾಲಯಗಳು, ಪರೀಕ್ಷಾ ಮೂಲಸೌಕರ್ಯಗಳು, ಡಿಜಿಟಲ್ ಎಂಜಿನಿಯರಿಂಗ್ ಮತ್ತು ದತ್ತಾಂಶ ವಿಶ್ಲೇಷಣೆಯು ತುಮಕೂರಿನ ಈ ಒಂದೇ ಕೇಂದ್ರದಲ್ಲಿ ದೊರೆಯಲಿದೆ ಎಂದರು.

## ಹಾಕಿ ಕೋಚ್ ಬಲದೇವ್‌ಗೆ 25ರಂದು ಪದ್ಮಶ್ರೀ ಪ್ರದಾನ

ನವದೆಹಲಿ (ಪಿಟಿಐ): ಹರಿಯಾಣದ ಶಾಹಬಾದ್ ಮಾರ್ಕಂಡ ನಗರವನ್ನು ಹಾಕಿ ಪ್ರತಿಭೆಗಳನ್ನು ಸಜ್ಜುಗೊಳಿಸುವ ಕೇಂದ್ರವನ್ನಾಗಿ ರೂಪಿಸಿದ ತರಬೇತುದಾರ ಬಲದೇವ್ ಸಿಂಗ್ ಅವರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮೇ 25ರಂದು ಪದ್ಮಶ್ರೀ ಪುರಸ್ಕಾರವನ್ನು ಪ್ರದಾನ ಮಾಡಲಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



75 ವರ್ಷ ವಯಸ್ಸಿನ ಸಿಂಗ್ ಅವರು 1982ರಲ್ಲಿ ಶಾಹಬಾದ್- ಮಾರ್ಕಂಡಕ್ಕೆ ಹರಿಯಾಣ ಕ್ರೀಡಾ ಇಲಾಖೆಯ ಕೋಚ್ ಆಗಿ ನೇಮಕಗೊಂಡಿದ್ದರು. ನಾಲ್ಕು ವರ್ಷ ಕೆಲಸ ಮಾಡಿದ್ದ ಅವರು 1993ರಲ್ಲಿ ಮತ್ತೆ ಮರಳಿದರು. ಈ ನಗರವನ್ನು 'ಹಾಕಿ ಆಟಗಾರರನ್ನು ಸೃಷ್ಟಿಸುವ ತಾಣ' ವನ್ನಾಗಿ ರೂಪಿಸಿದರು.

# ಸಿಎಡಿ ನಿಯಂತ್ರಣಕ್ಕೆ ಕ್ರಮ: ಕೇಂದ್ರ

## ಡಿಸೆಂಬರ್ ತ್ರೈಮಾಸಿಕದಲ್ಲಿ ₹1.27 ಲಕ್ಷ ಕೋಟಿಗೆ ಚಾಲ್ತಿ ಖಾತೆ ಕೊರತೆ ಏರಿಕೆ

ನವದೆಹಲಿ (ಪಿಟಿಐ): ಸದ್ಯದ ಪರಿಸ್ಥಿತಿಯನ್ನು ಕೇಂದ್ರ ಸರ್ಕಾರ ಅವಲೋಕಿಸುತ್ತಿದೆ, ಚಾಲ್ತಿ ಖಾತೆ ಕೊರತೆ (ಸಿಎಡಿ) ಹೆಚ್ಚುತ್ತಿರುವುದನ್ನು ನಿಯಂತ್ರಣಕ್ಕೆ ತರಲು ಹಲವು ಕ್ರಮಗಳನ್ನು ಪರಿಗಣಿಸಲಾಗುತ್ತಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ತಿಳಿಸಿದ್ದಾರೆ.



ಪೀಯೂಷ್ ಗೋಯಲ್

ದೇಶದ ಚಾಲ್ತಿ ಖಾತೆ ಕೊರತೆಯು ಡಿಸೆಂಬರ್ 31ಕ್ಕೆ ಕೊನೆಗೊಂಡ ತ್ರೈಮಾಸಿಕದಲ್ಲಿ 13.2 ಬಿಲಿಯನ್ ಡಾಲರ್‌ಗೆ (ಇಂದಿನ ₹1.27 ಲಕ್ಷ ಕೋಟಿ) ಹೆಚ್ಚಳ ಆಗಿದೆ. ಇದು ದೇಶದ ಜಿಡಿಪಿಯ ಶೇ 1.3ರಷ್ಟು. 2024ರ ಡಿಸೆಂಬರ್ 31ಕ್ಕೆ ಕೊನೆಗೊಂಡ ತ್ರೈಮಾಸಿಕದಲ್ಲಿ ಚಾಲ್ತಿ ಖಾತೆ ಕೊರತೆಯು 11.3 ಬಿಲಿಯನ್ ಡಾಲರ್ (ಇಂದಿನ ₹1.08 ಲಕ್ಷ ಕೋಟಿ) ಆಗಿತ್ತು.

ಅಮೆರಿಕಕ್ಕೆ ರಫ್ತು ಪ್ರಮಾಣ ಕಡಿಮೆ ಆಗಿದ್ದುದು ಕೊರತೆ ಹೆಚ್ಚುವುದಕ್ಕೆ ಒಂದು ಪ್ರಮುಖ ಕಾರಣ ಎಂದು ಆರ್‌ಬಿಐ ಮಾರ್ಚ್ 2ರಂದು ಬಿಡುಗಡೆ ಮಾಡಿರುವ ಅಂಕಿ-ಅಂಶಗಳು ಹೇಳುತ್ತಿವೆ.

ನಿರ್ದಿಷ್ಟ ಅವಧಿಯಲ್ಲಿ ಆಮದು ಮಾಡಿಕೊಂಡ ಸೇವೆಗಳು ಹಾಗೂ ಸರಕುಗಳ ಮೌಲ್ಯವು ದೇಶದಿಂದ ರಫ್ತಾದ ಸರಕುಗಳು ಹಾಗೂ ಸೇವೆಗಳ ಮೌಲ್ಯಕ್ಕಿಂತ ಜಾಸ್ತಿ ಆದಾಗ ಚಾಲ್ತಿ ಖಾತೆ ಕೊರತೆ ಉಂಟಾಗುತ್ತದೆ.

### ಮುಖ್ಯಾಂಶಗಳು

- ಅಮೆರಿಕಕ್ಕೆ ರಫ್ತು ಕಡಿಮೆ ಆಗಿರುವುದು ಕೊರತೆ ಹೆಚ್ಚಳಕ್ಕೆ ಕಾರಣ
- ಚಿನ್ನ, ಬೆಳ್ಳಿ ಆಮದು ಹೆಚ್ಚಳವೂ ಸಿಎಡಿ ಏರಿಕೆಗೆ ಕಾರಣ
- ಜಾಗತಿಕ ಮಟ್ಟದಲ್ಲಿ ಉಂಟಾಗಿರುವ ಪರಿಸ್ಥಿತಿ ಅವಲೋಕಿಸಿ ಕ್ರಮ

'ನಾವು ಪರಿಸ್ಥಿತಿಯನ್ನು ಅವಲೋಕಿಸುತ್ತಿದ್ದೇವೆ. ಸರ್ಕಾರದ ಎಲ್ಲ ಅಂಗಗಳು ಒಂದು ತಂಡವಾಗಿ ಕೆಲಸ ಮಾಡುತ್ತಿವೆ. ಹಲವು ಕ್ರಮಗಳನ್ನು ಪರಿಗಣಿಸಲಾಗುತ್ತಿದೆ. ಜಾಗತಿಕವಾಗಿ ಪರಿಸ್ಥಿತಿಯು ಸವಾಲಿನದ್ದಾಗಿದೆ. ಆದರೂ ಈ ಪರಿಸ್ಥಿತಿಯನ್ನೂ ನಾವು ಗೆದ್ದುಬರುತ್ತೇವೆ ಎಂಬ ಭರವಸೆ, ಧೈರ್ಯ ನಮಗೆ ಇದೆ' ಎಂದು ಗೋಯಲ್ ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ.

ರೂಪಾಯಿ ಮೌಲ್ಯ ಕುಸಿತ ಕಾಣುತ್ತಿರುವ ಹಿನ್ನೆಲೆಯಲ್ಲಿ ಚಾಲ್ತಿ ಖಾತೆ ಕೊರತೆ ಹೆಚ್ಚುವುದನ್ನು ತಡೆಯಲು ಸರ್ಕಾರ ಯಾವೆಲ್ಲ ಕ್ರಮಗಳನ್ನು ಕೈಗೊಳ್ಳಬಹುದು ಎಂಬ ಪ್ರಶ್ನೆಗೆ ಉತ್ತರವಾಗಿ ಅವರು ಹೀಗೆ ಹೇಳಿದ್ದಾರೆ.

ಚಿನ್ನ ಮತ್ತು ಬೆಳ್ಳಿ ಆಮದು ಹೆಚ್ಚುತ್ತಿರುವುದು ಕೂಡ ಸಿಎಡಿ ಹೆಚ್ಚುವುದಕ್ಕೆ ಒಂದು ಕಾರಣ. 2025-26ರಲ್ಲಿ ಚಿನ್ನದ ಆಮದು ಮೌಲ್ಯದ ಲೆಕ್ಕದಲ್ಲಿ ಶೇ 24ರಷ್ಟು ಜಾಸ್ತಿ ಆಗಿದೆ. ಇದೇ ಅವಧಿಯಲ್ಲಿ ಬೆಳ್ಳಿಯ ಆಮದು ಶೇ 150ರಷ್ಟು ಜಾಸ್ತಿ ಆಗಿದೆ.

# ಸಬಲ ಕುಟುಂಬದವರಿಗೆ ಮೀಸಲಾತಿ ಏಕೆ?

## ಅಪ್ಪ-ಅಮ್ಮ ಐಎಎಸ್ ಅಧಿಕಾರಿಗಳಾಗಿದ್ದರೂ ಮಕ್ಕಳಿಗೇಕೆ ಮೀಸಲಾತಿ- ಸುಪ್ರೀಂ ಕೋರ್ಟ್ ಪ್ರಶ್ನೆ

ನವದೆಹಲಿ (ಪಿಟಿಐ): ಶೈಕ್ಷಣಿಕ ಮತ್ತು ಆರ್ಥಿಕ ಸಬಲೀಕರಣದ ಜತೆಗೆ ಸಾಮಾಜಿಕ ಚಲನಶೀಲತೆ ಇರುತ್ತದೆ ಎಂಬುದನ್ನು ಹೇಳಿದ ಸುಪ್ರೀಂ ಕೋರ್ಟ್, ಹಿಂದುಳಿದ ವರ್ಗಗಳಿಗೆ ಸೇರಿದ್ದರೂ ಆರ್ಥಿಕ ಮತ್ತು ಶೈಕ್ಷಣಿಕವಾಗಿ ಮುಂದುವರಿದಿರುವ ಕುಟುಂಬಗಳ ಮಕ್ಕಳಿಗೆ ಮೀಸಲಾತಿ ಸೌಲಭ್ಯ ನೀಡುವುದನ್ನು ಶುಕ್ರವಾರ ಪ್ರಶ್ನಿಸಿದೆ.

ಅರ್ಜಿದಾರರ ಇಬ್ಬರೂ ಪೋಷಕರು ರಾಜ್ಯ ಸರ್ಕಾರಿ ನೌಕರರಾಗಿದ್ದು, ಅವರನ್ನು ಮೀಸಲಾತಿಯಿಂದ ಹೊರಗಿಟ್ಟ ಕ್ರಮವನ್ನು ಎತ್ತಿಹಿಡಿದ ಕರ್ನಾಟಕ ಹೈಕೋರ್ಟ್ ತೀರ್ಪನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಲಾಗಿದೆ. ಈ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಬಿ.ವಿ.ನಾಗರತ್ನ ಮತ್ತು ಉಜ್ವಲ್ ಭುಯಾನ್ ಅವರಿದ್ದ ಪೀಠ ನಡೆಸಿತು.

### ಮುಖ್ಯಾಂಶಗಳು

- ಕರ್ನಾಟಕ ಹೈಕೋರ್ಟ್ ತೀರ್ಪು ಪ್ರಶ್ನಿಸಿರುವ ಅರ್ಜಿಯ ವಿಚಾರಣೆ
- ಕೆಪಿಸಿಎಲ್‌ಗೆ ಆಯ್ಕೆ ಆಗಿದ್ದ ಅಭ್ಯರ್ಥಿಯಿಂದ ಮೇಲ್ಮನವಿ
- ಅಭ್ಯರ್ಥಿಯ ಪೋಷಕರು ಕೆನೆಪದರದೊಳಗೆ ಬರುತ್ತಾರೆ

'ಇಬ್ಬರೂ ಪೋಷಕರು ಐಎಎಸ್ ಅಧಿಕಾರಿಗಳಾಗಿರುವಾಗ, ಅವರ ಮಕ್ಕಳಿಗೆ ಮೀಸಲಾತಿ ಏಕೆ ಬೇಕು? ಶೈಕ್ಷಣಿಕ ಮತ್ತು ಆರ್ಥಿಕ ಸಬಲೀಕರಣದೊಂದಿಗೆ ಸಾಮಾಜಿಕ ಚಲನಶೀಲತೆಯೂ ಇರುತ್ತದೆ. ಮಕ್ಕಳಿಗಾಗಿ ಪುನಃ ಮೀಸಲಾತಿ ಕೇಳಿದರೆ, ನಾವು ಎಂದಿಗೂ ಅದರಿಂದ ಹೊರ ಬರುವುದಿಲ್ಲ' ಎಂದು ಪೀಠ ಹೇಳಿತು.

**'ಮೀಸಲಾತಿಯಿಂದ ಹೊರಬರಬೇಕು':** 'ಪೋಷಕರು ಉತ್ತಮ ಉದ್ಯೋಗಗಳಲ್ಲಿದ್ದು ಉತ್ತಮ ಆದಾಯ ಹೊಂದಿದ್ದರೆ ಅವರ ಮಕ್ಕಳು ಮೀಸಲಾತಿಯಿಂದ ಹೊರಬರಬೇಕು' ಎಂದು ಪೀಠ ಇದೇ ವೇಳೆ ಉಲ್ಲೇಖಿಸಿತು.

ಶ್ರೀಮಂತ ವರ್ಗಗಳನ್ನು ಮೀಸಲಾತಿ ಸೌಲಭ್ಯಗಳಿಂದ ಹೊರಗಿಡಲು ಸರ್ಕಾರ ಈಗಾಗಲೇ ಹಲವು ಆದೇಶಗಳನ್ನು ಜಾರಿಗೊಳಿಸಿದೆ. ಆದರೆ ಈಗ ಅವುಗಳನ್ನು ಪ್ರಶ್ನಿಸಲಾಗುತ್ತಿದೆ ಎಂದು ಪೀಠ ಹೇಳಿತು.

**ಪ್ರಕರಣದ ವಿವರ:** ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದಲ್ಲಿ (ಕೆಪಿಟಿಸಿಎಲ್) ಮೀಸಲು ವರ್ಗದ ಅಡಿಯಲ್ಲಿ ಅರ್ಜಿದಾರರನ್ನು ಸಹಾಯಕ ಎಂಜಿನಿಯರ್ (ವಿದ್ಯುತ್) ಹುದ್ದೆಗೆ ಆಯ್ಕೆ ಮಾಡಲಾಗಿತ್ತು.

ಆದರೆ, ಜಿಲ್ಲಾ ಜಾತಿ ಮತ್ತು ಆದಾಯ ಪರಿಶೀಲನಾ ಸಮಿತಿಯು ಅವರು ಕೆನೆಪದರದೊಳಗೆ ಬರುತ್ತಾರೆ ಎಂದು ತೀರ್ಮಾನಿಸಿ, ಅವರ ಜಾತಿ ಪ್ರಮಾಣಪತ್ರದ ಸಿಂಧುತ್ವವನ್ನು ರದ್ದುಗೊಳಿಸಿತು.

ಅಭ್ಯರ್ಥಿಯ ಇಬ್ಬರೂ ಪೋಷಕರು ಸರ್ಕಾರಿ ನೌಕರರಾಗಿದ್ದು, ಅವರ ಒಟ್ಟು ಆದಾಯವು ನಿಗದಿತ ಕೆನೆಪದರದ ಮಿತಿಯನ್ನು (₹ 8 ಲಕ್ಷ) ಮೀರಿದೆ ಎಂದು ಅಧಿಕಾರಿಗಳು ಉಲ್ಲೇಖಿಸಿದ್ದಾರೆ. ಕುರುಬ ಸಮುದಾಯಕ್ಕೆ ಸೇರಿದ್ದ ಅರ್ಜಿದಾರರ ಜಾತಿ ಪ್ರಮಾಣಪತ್ರ ಸಿಂಧುತ್ವ ಈ ಕಾರಣಕ್ಕೆ ರದ್ದುಗೊಂಡಿತ್ತು.

### ಕಪ್ಪುಪಟ್ಟಿಯಿಂದ ಶಿಕ್ಷಣ ತಜ್ಞರ ಹಿಂದಕ್ಕೆ ಪಡೆದ ಸುಪ್ರೀಂ

ನವದೆಹಲಿ (ಪಿಟಿಐ): ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಪರಿಷತ್ತು (ಎನ್‌ಸಿಇಆರ್‌ಟಿ) ಪ್ರಕಟಿಸಿದ್ದ ಪಠ್ಯಪುಸ್ತಕದಲ್ಲಿನ ನ್ಯಾಯಾಂಗದ ಅಧ್ಯಾಯಕ್ಕೆ ಸಂಬಂಧಿಸಿದಂತೆ ಮೂವರು ತಜ್ಞರನ್ನು ಕಪ್ಪುಪಟ್ಟಿಗೆ ಸೇರ್ಪಡೆಗೊಳಿಸಿ ಮಾರ್ಚ್ 11ರಂದು ನೀಡಿದ ಆದೇಶವನ್ನು ಸುಪ್ರೀಂಕೋರ್ಟ್ ಶುಕ್ರವಾರ ಮಾರ್ಪಡಿಸಿದೆ.



'ರಾಜ್ಯ, ಕೇಂದ್ರ ಸರ್ಕಾರ, ಸರ್ಕಾರಿ ಸ್ವಾಮ್ಯದ ವಿಶ್ವವಿದ್ಯಾಲಯಗಳು, ರಾಜ್ಯ, ಕೇಂದ್ರ ಸರ್ಕಾರದ ಅನುದಾನಿತ ಸಂಸ್ಥೆಗಳು ಮಾರ್ಚ್ 11ರಂದು ನೀಡಿದ ಆದೇಶದಿಂದ ಪ್ರಭಾವಿತವಾಗದೇ, ಸ್ವತಂತ್ರ ನಿರ್ಧಾರ ತೆಗೆದುಕೊಳ್ಳಬಹುದು' ಎಂದು ತಿಳಿಸಿದೆ.

ಎನ್‌ಸಿಇಆರ್‌ಟಿ ಪ್ರಕಟಿಸಿದ್ದ 8ನೇ ತರಗತಿಯ ಪಠ್ಯಪುಸ್ತಕದಲ್ಲಿನ ನ್ಯಾಯಾಂಗ ವಿಷಯಕ್ಕೆ ಸಂಬಂಧಿಸಿದಂತೆ ಸ್ವಯಂ ಪ್ರೇರಿತವಾಗಿ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್, ಅದರಲ್ಲಿನ ವಿಷಯಗಳು ನ್ಯಾಯಾಂಗದ ಘನತೆಯನ್ನು ಕುಗ್ಗಿಸುವಂತಿವೆ ಎಂಬುದಾಗಿ ಹೇಳಿತ್ತು. ಈ ಸಂಬಂಧ ಕ್ಷಮೆ ಕೋರಿದ್ದ ಎನ್‌ಸಿಇಆರ್‌ಟಿ ಈ ಪುಸ್ತಕಗಳನ್ನು ಮಾರುಕಟ್ಟೆಯಿಂದ ಹಿಂತೆಗೆದುಕೊಂಡಿತ್ತು.

ಈ ಪಠ್ಯ ರಚನೆಯಲ್ಲಿ ಮತ್ತು ಅದನ್ನು ಅಂತಿಮಗೊಳಿಸುವಲ್ಲಿ ತೊಡಗಿದ್ದ ತಜ್ಞರಾದ ಪ್ರೊ. ಮೈಕೆಲ್ ಡ್ಯಾನಿನೊ, ಸುಪರ್ಣ ದಿವಾಕರ್ ಮತ್ತು ಆಲೋಕ್ ಪ್ರಸನ್ನ ಕುಮಾರ್ ಅವರನ್ನು ಭಾರತದಲ್ಲಿ ಯಾವುದೇ ಪಠ್ಯ ಪುಸ್ತಕ ರಚನಾ ಕಾರ್ಯಗಳಿಗೆ ನಿಯೋಜಿಸಬಾರದು ಎಂದು ಸುಪ್ರೀಂ ಕೋರ್ಟ್ ನಿರ್ದೇಶಿಸಿತ್ತು.

ನಾವು ಮೂರು ಮಂದಿಯಷ್ಟೇ ಪಠ್ಯ ರಚಿಸಿಲ್ಲ, ಇದು ಸಾಮೂಹಿಕ ಪ್ರಕ್ರಿಯೆಯಾಗಿತ್ತು, ಹೀಗಾಗಿ, ತಮ್ಮ ವಿರುದ್ಧ ಮಾಡಿರುವ ನಿರ್ಬಂಧಗಳನ್ನು ಮರು ಪರಿಶೀಲಿಸುವಂತೆ ಮೂವರು ಸುಪ್ರೀಂಗೆ ಮನವಿ ಮಾಡಿದ್ದರು. ಈ ಅರ್ಜಿ ವಿಚಾರಣೆ ನಡೆಸಿದ ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿ ಜಾಯ್‌ಮಾಲ್ಯಾ ಬಾಗ್ಚಿ, ನ್ಯಾಯಮೂರ್ತಿ ವಿಪುಲ್ ಎಂ. ಪಂಚೋಲಿ ಅವರ ನ್ಯಾಯಪೀಠ, ಮೂವರು ನೀಡಿದ ವಿವರಣೆಯಿಂದ ತೃಪ್ತಿಗೊಂಡಿದ್ದೇವೆ. ಈ ಕುರಿತು ಶಿಕ್ಷಣ ಸಂಸ್ಥೆಗಳು ಸ್ವತಂತ್ರ ನಿರ್ಧಾರ ತೆಗೆದುಕೊಳ್ಳಬಹುದು ಎಂದು ಸ್ಪಷ್ಟಪಡಿಸಿದೆ.